MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 228 | ಬುಧವಾರ : 25-06-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 228 | WEDNESDAY : 25-06-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಸಿಎಂ- ಮುರ್ಮು ಭೇಟಿ 5 ವಿಧೇಯಕ ಅನುಮೋದನೆಗೆ ಮನವಿ



**ಬೆಂಗಳೂರು,ಜೂ.24**–ರಾಜ್ಯದ ರಾಜ್ಯಪಾಲರು ಅಂಕಿತ ಹಾಕಲು ನಿರಾಕರಿಸಿ ರಾಷ್ಟ್ರಪತಿಯವರಿಗೆ ಕಳುಹಿಸಿರುವ 5 ಪ್ರಮುಖ ವಿಧೇಯಕಗಳಿಗೆ ಅನುಮೋದನೆ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಕೋರಿದರು ಇಂದು ಬೆಳಿಗ್ಗೆ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದೌರ್ಪದಿ ಮುರ್ಮು ಅವರನ್ನು ಭೇಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾಕಿ ಇರುವ ರಾಜ್ಯದ ವಿಧೇಯಕಗಳಿಗೆ ಒಪ್ಪಿಗೆ ನೀಡುವಂತೆ ಮನವಿ ಮಾಡಿದರು ರಾಜ್ಯದ ಶಾಲೆಗಳಲ್ಲಿ 1 ರಿಂದ 5ನೇ ತರಗತಿವರೆಗೆ ಮಾತೃಭಾಷೆ ಮಾಧ್ಯಮದಲ್ಲೇ ಶಿಕ್ಷಣ ನೀಡುವ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕುಕಾಯ್ದೆ-2015 ಅಲ್ಪಸಂಖ್ಯಾತರಿಗೆ ಸರ್ಕಾರಿ ಕಾಮಗಾರಿಗಳಲ್ಲಿ ಶೇ. 4 ರಷ್ಟು ಮೀಸಲಾತಿ ಕಲ್ಪಿಸುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ತಿದ್ದುಪಡಿ ವಿಧೇಯಕ-2025, ರಾಜ್ಯದ ಎ ವರ್ಗದ ದೇವಾಲಯಗಳಲ್ಲಿ ಸಂಗ್ರಹವಾಗುವ ಸಾಮಾನ್ಯ ಸಂಗ್ರಹಣಾ ನಿಧಿಯ ಶೇ. 5ರಿಂದ ಶೇ. 10 ರಷ್ಟು ಆದಾಯವನ್ನು ಸಿ ವರ್ಗದ ದೇವಸ್ಥಾನಗಳ ಅಭಿವೃದ್ಧಿಗೆ ಬಳಸುವುದನ್ನು ಕಡ್ಡಾಯಗೊಳಿಸುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧುದಾಯ 2ನೇಪುಟಕ್ಕೆ

## ಕೆಂಪೇಗೌಡ ಜಯಂತಿ ಆಚರಣೆಗೆ ಅಗತ್ಯ ಸಿದ್ಧತೆ ಮಾಡಲು ಸೂಚನೆ

ಯುವ ಮಾರ್ಗ ಸುದ್ದಿ



**ರಾಯಚೂರು,ಜೂ.24**–ಇಲ್ಲಿನ ಜಿಲ್ಲಾಡಳಿತದಿಂದ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಆಚರಣೆ ಸಂಬಂಧ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರ ಅಧ್ಯಕ್ಷತೆಯಲ್ಲಿ ಸಮುದಾಯದ ಮುಖಂಡರು, ವಿವಿಧ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಯಿತು. ಇದೆ ವೇಳೆ ಅಪರ ಜಿಲ್ಲಾಧಿಕಾರಿಗಳು ಮಾತನಾಡಿ, ನಾಡಿನ ಅಭಿವೃದ್ಧಿಗಾಗಿ ಜನಪರ ಯೋಜನೆಗಳನ್ನು ಜಾರಿಗೊಳಿಸಿದ ಕೆಂಪೇಗೌಡ ಅವರ ಪರಿಶ್ರಮದಿಂದ ಬೆಂಗಳೂರು ಇಂದು ವಿಶ್ವ ಮಟ್ಟದಲ್ಲಿ ಹೆಸರು ಗಳಿಸಿದೆ. ಸರ್ಕಾರದ ನಿರ್ದೇಶನದಂತೆ ಕೆಂಪೇಗೌಡ ಅವರ ಜೀವನ ಸಾಧನೆಗಳನ್ನು ಸ್ಮರಿಸುವ ಸಲುವಾಗಿ ಇದೇ ತಿಂಗಳ 27 ರಂದು ನಗರದಲ್ಲಿ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜೂ.27ರಂದು ನಗರದ ಪಂಡಿತ ಜಂಬಲದಿನ್ನಿ ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು.ಶಿಷ್ಠಾಚಾರಂತೆ ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರಿಗೆ ವಿತರಿಸಬೇಕು. ಅಂದು ರಂಗಮಂದಿರದ ಆವರಣದಲ್ಲಿ ಕುಡಿಯುವ ನೀರು ಸೇರಿದಂತೆ ಎಲ್ಲಾ ಅಗತ್ಯ ಏರ್ಪಾಡು ಮಾಡಬೇಕು. ನಗರದ ಮುಖ್ಯ ರಸ್ತೆಗಳು ಮತ್ತು ಆವರಣದಲ್ಲಿ ಶುಚಿತ್ವ ಕಾಯ್ದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಾರ್ಯಕ್ರಮ ಯಶಸಿಗೆ ಸಕಲ ಸಿದ್ಧತೆ ಮಾಡಿಕೊಳ್ಳಲು ಇಲಾಖಾವಾರು ಅಧಿಕಾರಿಗಳಿಗೆ ಜವಾಬ್ದಾರಿ ಹಂಚಿಕೆ ಮಾಡಲಾಗುವುದು. ಯಾವುದೇ ಲೋಪವಾಗದಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಶಾಲಾ ಹಾಗೂ ಕಾಲೇಜ್ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಂಡು ವಿಜೇತರಿಗೆ ಪ್ರಶಸ್ತಿ ಪ್ರಮಾಣ ಪತ್ರವನ್ನು ನೀಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ವೇಳೆ ಸಮಾಜ ಮುಖಂಡರು ಮಾತನಾಡಿ, ವೇದಿಕೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಜನಪ್ರತಿನಿಧಿಗಳು, ಜಿಲ್ಲಾ ಮಟ್ಟದ ಅಧಿಕಾರಿ, ಸಿಬ್ಬಂದಿ ಕಾರ್ಯಕ್ರಮದಲ್ಲಿ ತಪ್ಪದೇ ಪಾಲ್ಗೊಳ್ಳಬೇಕು. ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡ ಅವರ ಬಗ್ಗೆ ಉಪನ್ಯಾಸ 2ನೇ ಪುಟಕ್ಕೆ

## ಮೂಲಭೂತ ಸೌಕರ್ಯ ಒದಗಿಸಲು ಕೆಆರ್‌ಎಸ್ ಪಕ್ಷದ ಕಾರ್ಯಕರ್ತರ ಒತ್ತಾಯ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.24**–ಪಟ್ಟಣದಲ್ಲಿ ಇರುವ 80% ಜನರು ತೆರಿಗೆ ಕಟ್ಟುತ್ತಾರೆ ಆದರೆ ತೆರಿಗೆ ನೀಡಿದರು ಅಲ್ಲಿನ ವಾರ್ಡನ ಸಮಸ್ಯೆ ಮಾತ್ರ ಅದೇ ರೀತಿ ಇರುತ್ತದೆ ಕೂಡಲೇ ಸಾರ್ವಜನಿಕರ ಮೂಲಭೂತ ಸೌಕರ್ಯ ಒದಗಿಸಿ ಎಂದು ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಪುರಸಭೆ ಮುಖ್ಯಾಧಿಕಾರಿ ಮನವಿ ಸಲ್ಲಿಸಿ ಒತ್ತಾಯಿಸಿದರು.

ವಾರ್ಡ್ ನಂಬರ್ 07 ಅಮರೇಗೌಡ ಆಸ್ಪತ್ರೆ ಹಿಂದುಗಡೆ ಇರುವ ಸಾರ್ವಜನಿಕ ಉದ್ಯಾನವನದಲ್ಲಿ ಇರುವ ಬೋರ್ವೆಲ್, ಮತ್ತು ವಾರ್ಡ್ ನಂಬರ್ 10 ಡೋಹರ ಓಣಿ ಬನ್ನಿ ಕಟ್ಟೆ ಮುಂದೆ ಇರುವಂತಹ ಸಾರ್ವಜನಿಕ ಬೋರ್ವೆಲ್, ಈ 2 ಬೋರ್ವೆಲ್ ದುರಸ್ತಿ ಎಲ್ಲಿದೆ ಎಂದು 8 ತಿಂಗಳ ಹಿಂದೆ ಪುರಸಭೆಯ ಸಿಬ್ಬಂದಿಗಳು ಬೋರ್ವೆಲ್ ತೆಗೆದುಕೊಂಡು ಹೋಗಿರುತ್ತಾರೆ.

ಇದುವರೆಗೂ ಸಾರ್ವಜನಿಕರು ಬಹಳಷ್ಟು ಮನವಿ ಮಾಡಿಕೊಂಡರು, ಮನವಿ ಪತ್ರವನ್ನು ನೀಡಿದರು ಅವರ ಸಮಸ್ಯೆಗೆ ಪುರಸಭೆ ಅಧಿಕಾರಿಗಳಿಂದ ಯಾವುದೇ ಪ್ರತಿಕ್ರಿಯೆ ಸಿಕ್ಕಿರುವುದಿಲ್ಲ. ದಯವಿಟ್ಟು ಸಾರ್ವಜನಿಕರಿಗೆ ಬೋರ್ವೆಲ್ ಅಳವಡಿಸಿ ಅನುಕೂಲ ಮಾಡಿಕೊಡಬೇಕು.

ಈಗ ಮಳೆಗಾಲ ಆರಂಭವಾಗಿದ್ದು ಲಿಂಗಸಗೂರು ನಗರದ ರಸ್ತೆಗಳಲ್ಲಿ ಗುಂಡಿಗಳು ಹಳ್ಳಗಳಾಗಿ ಮಾರ್ಪ ಡೆಯಾಗಿದ್ದು ಇದರಿಂದ ಸಾರ್ವಜನಿಕರಿಗೆ ನಡೆದಾಡಲು ಹಾಗೂ ವಾಹನ ಸವಾರರಿಗೆ ಬಹಳಷ್ಟು ತೊಂದರೆ ಆಗುತ್ತಿದೆ, ಮುಂದೆ ಯಾವುದು ಅನಾಹುತ ಆಗದ ಹಾಗೆ ದಯವಿಟ್ಟು ತಾವುಗಳು ಈ ರಸ್ತೆಗಳಿಗೆ ಗುಂಡಿ ಮುಚ್ಚುವ ವ್ಯವಸ್ಥೆ ಮಾಡಬೇಕು.

ಮಳೆಗಾಲ ಆರಂಭವಾಗಿದ್ದು 2, 3 ತಿಂಗಳಾದರೂ ಚರಂಡಿಗಳನ್ನು ಸ್ವಚ್ಛಗೊಳಿಸುತ್ತಿಲ್ಲ, ಲಿಂಗಸುಗೂರು ನಗರದ್ಯಂತ ಚರಂಡಿ ಸ್ವಚ್ಛತೆ ಗೊಳಿಸಬೇಕು.

ಲಿಂಗಸಗೂರು ನಗರದಾದ್ಯಂತ ಮುಖ್ಯ ರಸ್ತೆಗಳಲ್ಲಿ ಧೂಳು ಮಿತಿಮೀರಿದೆ ಇದರಿಂದ ಸಾರ್ವಜನಿಕರಿಗೆ ಕೆಮ್ಮು, ನೆಗಡಿ, ಅಸ್ತಮಾ, ಕಣ್ಣಿನ ಸಮಸ್ಯೆ ಬಹಳಷ್ಟು ಕಂಡುಬರುತ್ತಿದೆ. ದಯವಿಟ್ಟು ಇದು ನಿವಾರಣಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಲಿಂಗಸಗೂರು ನಗರದಾದ್ಯಂತ ಕಸಗಳನ್ನು ತೆಗೆದು ನಗರವನ್ನು 2ನೇ ಪುಟಕ್ಕೆ

## ಪ್ರಥಮ ಚಿಕಿತ್ಸೆ ಕುರಿತು ರಾಜ್ಯಮಟ್ಟದ ಕಾರ್ಯಗಾರ

ಯುವ ಮಾರ್ಗ ಸುದ್ದಿ




**ಮಾನ್ವಿ,ಜೂ.24**–ಪಟ್ಟಣದ ಕಲ್ಮಠದ ಪೂಜ್ಯ ಶ್ರೀವಿರೂಪಾಕ್ಷ ಶಿವಾಚಾರ್ಯ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಸಭಾಂಗಣದಲ್ಲಿ ಮೂಲಭೂತ ಜೀವರಕ್ಷಕ ವಿಧಾನಗಳು ಹಾಗೂ ಪ್ರಥಮ ಚಿಕಿತ್ಸೆ ಕುರಿತು ನಡೆದ ಒಂದು ದಿನದ ರಾಜ್ಯ ಮಟ್ಟದ ಕಾರ್ಯಗಾರವನ್ನು ಕಲ್ಮಠದ ಶ್ರೀವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಉದ್ಘಾಟಿಸಿ ಮಾತನಾಡಿ, ಪ್ರತಿ ಯೋಬ್ಬ ವೈದ್ಯ ವಿದ್ಯಾರ್ಥಿಗಳು ಹಾಗೂ ಸಾಮಾನ್ಯರು ಕೂಡ ತುರ್ತು ಸಂದರ್ಭದಲ್ಲಿ ಮೂಲಭೂತ ಜೀವರಕ್ಷಕ ವಿಧಾನಗಳು ಹಾಗೂ ಪ್ರಥಮ ಚಿಕಿತ್ಸೆ ಕುರಿತು ತಿಳಿದುಕೊಂಡಲ್ಲಿ ಅತ್ಯವಸರ ಸಂದರ್ಭದಲ್ಲಿ ಜೀವವನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಉದ್ದೇಶದಿಂದ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳಿಂದ ಕಾರ್ಯ ಗಾರವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳಾದ ಹೈದ್ರಾಬಾದ್‌ನ ಅಮೇರಿಕನ್ ಹಾರ್ಟ ಅಸೋಸಿಯೇಶನ್ ಡಾ.ನೀರಾಜ ಲಕ್ಷ್ಮೀ ಮಾತನಾಡಿ ಮಾನವನ ದೇಹದಲ್ಲಿನ ಅಂಗಗಳಲ್ಲಿ ಪ್ರಮುಖವಾದ ಅಂಗಗಳಾದ ಹೃದಯ,ಶ್ವಾಶಕೋಶ,ಮೆದುಳು ಇವುಗಳು ತಮ್ಮ ಕಾರ್ಯವನ್ನು ಮಾಡುವುದನ್ನು ನಿಲ್ಲಿಸಿದಕ್ಷಣ ಮನುಷ್ಯರಿಗೆ ಸಾವು ಸಂಭವಿಸುತ್ತದೆ. ಹೃದಯವು ಶುದ್ದವಾದ ರಕ್ತ ಮೆದುಳು ಹಾಗೂ ಶ್ವಾಶಕೋಶಗಳಿಗೆ ಪೂರೈಕೆ ಮಾಡುವುದನ್ನು ನಿಲ್ಲಿಸಿದಲ್ಲಿ ಕೂಡ ಸಾವು ಸಂಭವಿಸುತ್ತದೆ 2ನೇ ಪುಟಕ್ಕೆ

## 'ಪ್ರತಿನಿತ್ಯ ಪ್ರತಿ ಸಾಮಾನ್ಯರಿಗೂ ಪಂಚಕರ್ಮ' ಕೃತಿ ಬಿಡುಗಡೆ




ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.24**–ಪಟ್ಟಣದ ಕಲ್ಮಠದ ಪೂಜ್ಯ ಶ್ರೀ ವಿರೂಪಾಕ್ಷ ಶಿವಾಚಾರ್ಯ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಸಭಾಂಗಣದಲ್ಲಿ ಎಸ್.ವಿ.ಕೆ.ಟ್ರಸ್ಟ್ ಪ್ರಕಾಶನದ ಡಾ.ಅಬುಜುಬೇರ್ ರಚಿಸಿದ ಪ್ರತಿನಿತ್ಯ ಪ್ರತಿ ಸಾಮಾನ್ಯರಿಗೂ ಪಂಚ 'ಕರ್ಮ ಎನ್ನುವ ಕೃತಿಯನ್ನು ಕಲ್ಮಠದ ಶ್ರೀವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಲೋಕರ್ಪಣೆ ಗೊಳಿಸಿ ಮಾತನಾಡಿ, ಇಂದಿನ ದಿನಗಳಲ್ಲಿ ಸರಿಯಾದ ಜೀವನ ಕ್ರಮ ,ಆಹಾರ,ನಿದ್ರೆ, ದುಷ್ಚಟಗಳಿಂದಾಗಿ ಅಯೂಷ್ಯ ಪ್ರಮಾಣದಲ್ಲಿ ಇಳಿಕೆ ಯಾಗುತ್ತಿರುವುದು ಕಂಡುಬರುತ್ತಿದೆ. ಹದಿಹರೆಯಾದ ಯುವಸಮುದಾಯ ಸರಿಯಾದ ಬದುಕಿನ ಕ್ರಮವನ್ನು ಅನುಸರಿಸುವಲ್ಲಿ ವಿಫಲರಾಗಿದ್ದು ಅನಾರೋಗ್ಯಕ್ಕೆ ಹಾಗೂ ಅಕಾಲಿಕ ಹೃದಯಘಾತ ಸಂಭವಿಸಿ ಸಾವನ್ನುತ್ತಿರುವುದನ್ನು ಕಾಣಬಹುದು ನಮ್ಮ ಪ್ರಾಚೀನ ಜೀವನ ಹಾಗೂ ವೈದ್ಯಪದ್ದತಿಯಲ್ಲಿ ತಿಳಿಸಿದಂತೆ ನಾವು ಬದುಕನ್ನು ಕಟ್ಟಿಕೊಂಡಲ್ಲಿ ಮಾತ್ರ ಉತ್ತಮ ಜೀವನ ನಮ್ಮದಾಗುತ್ತದೆ , ಕಲ್ಮಠದ ಪೂಜ್ಯ ಶ್ರೀ ವಿರೂಪಾಕ್ಷ ಶಿವಾಚಾರ್ಯ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ಪಂಚ 'ಕರ್ಮ ವಿಭಾಗದ ತಜ್ಞ ವೈದ್ಯರಾದ ಡಾ.ಅಬುಜುಬೇರ್ ರವರು ಜನಸಾಮಾ ನ್ಯರಿಗೂ ತಿಳಿಯುವಂತೆ ಸರಳವಾಗಿ ಪಂಚಕರ್ಮ ಚಿಕಿತ್ಸೆಯಿಂದ ಉತ್ತಮ ಆರೋಗ್ಯ ಪಡೆದುಕೊಳ್ಳುವ ಕುರಿತು ತಿಳಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಪಂಚಕರ್ಮ ಕೃತಿಯ ಲೇಖಕರಾದ ಡಾ.ಅಬುಜುಬೇರ್ ರನ್ನು ವೇದಿಕೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಜೀವನೇಶ್ವರಯ್ಯ, ಉಪ ಪ್ರಾಂಶುಪಾಲರಾದ ಡಾ.ಸುಮಂಗಲ. ಹೆಚ್.ಎಂ,ಕಾಲೇಜಿನ ಆಡಳಿತಾಧಿಕಾರಿಗಳಾದ ವಿಶ್ವರಾಧ್ಯಸ್ವಾಮಿ, ಕೃತಿಯ ಲೇಖಕರಾದ ಡಾ.ಅಬುಜುಬೇರ್ ,ಡಾ.ಮೋಹನ್, ಗಂಗಾವತಿ ಸ್ಪೂರ್ತಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್‌ನ ಪ್ರಾಚಾರ್ಯರಾದ ಡಾ.ಬಸವರಾಜ ಎಸ್. 2ನೇಪುಟಕ್ಕೆ

## ಸಿರಿ ಧಾನ್ಯಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ಜೂ.24**– ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಲಿಂಗಸುಗೂರು ಕಛೇರಿಯಲ್ಲಿ ಸಿರಿಧಾನ್ಯಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಿರಿಧಾನ್ಯಗಳನ್ನು ಕಡಿಮೆ ಖರ್ಚಿನಲ್ಲಿ ಬೆಳಯಬಹುದಾದ ಬೆಳೆಯಾಗಿದ್ದು, ಇದನ್ನು ರೈತರು ತಮ್ಮ ದಿನನಿತ್ಯದ ಆಹಾರದಲ್ಲಿ ಬಳಸುವುದು ಪ್ರಮುಖವಾಗಿದೆ ಹಾಗೂ ಸಿರಿಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ರೈತರು ಬಳೆಯುವಲ್ಲಿ ಹೆಚ್ಚಿನ ಆಸಕ್ತಿ ಹೊಂದುತ್ತಾ, ಸಿರಿಧಾನ್ಯಗಳ ಸೇವನೆಯಿಂದಾಗುವ ಆರೋಗ್ಯಕರ ಲಾಭಗಳನ್ನು ರೈತರಿಗೆ ತಿಳಿಸಿದರು. ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಯಿಂದ ಆರ್ಥಿಕ ಲಾಭವನ್ನು ಹೊಂದಬಹುದಾಗಿದೆ ಎಂದು ಹೇಳಿದರು.

ಇತ್ತೀಚೆಗೆ ಸಿರಿಧಾನ್ಯಗಳ ಬೇಡಿಕೆ ಹಚ್ಚಾಗುತಲಿದ್ದು, ಇದನ್ನು ಮನಗಂಡು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ರೈತರಿಗೆ ತಿಳಿಸಿದರು. ಕೇಂದ್ರದ ವಿಷಯ ತಜ್ಞರಾದ ರೇಣುಕಾ ಬಿರಾದಾರ ಇವರು ಅಂತರ್‌ಬೆಳೆ ಪದ್ಧತಿಯಲ್ಲಿ ನವಣೆಯನ್ನು ಬೆಳೆಯುವ ವಿಧಾನ ಹಾಗೂ ಬೇಸಾಯ ಕ್ರಮಗಳನ್ನು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ರೈತ ಸಂಗಣ್ಣ, ಹಸನಸಾಬ್, ಲಕ್ಷ್ಮೀ, ದೇವಮ್ಮ, ಜ್ಯೋತಿ ಇನ್ನಿತರರು ಉಪಸ್ಥಿತರಿದ್ದರು

## ಮೊದಲನೇಯ ಪುಟದಿಂದ

# ಕೆಂಪೇಗೌಡ ಜಯಂತಿ ಆಚರಣೆಗೆ ಅಗತ್ಯ ಸಿದ್ಧತೆ ಮಾಡಲು ಸೂಚನೆ

ಏರ್ಪಡಿಸಬೇಕು ಎಂದು ಸಲಹೆ ಮಾಡಿದರು. ಕಾರ್ಯಕ್ರಮದಲ್ಲಿ ಕೆಂಪೇಗೌಡರ ವಿಚಾರಧಾರೆಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ಸನ್ಮಾನ ಹಾಗೂ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಬೇಕು ಎಂದು ಇದೆ ವೇಳೆ ಸಮಾಜದ ಬಂಧುಗಳು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ಟಿ.ತಿರುಮಲ, ರಾಯಚೂರು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಈರಣ್ಣ ಕೋಸಗಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇಸ್ಮಾಯಿಲ್ ಸೇರಿದಂತೆ ಸಮಾಜ ಮುಖಂಡರು ಇದ್ದರು.

# ಸಿಎಂ– ಮುರ್ಮು ಭೇಟಿ 5 ವಿಧೇಯಕ ಅನುಮೋದನೆಗೆ ಮನವಿ

ದತ್ತಿಗಳ ತಿದ್ದುಪಡಿ ವಿಧೇಯಕ, ಕರ್ನಾಟಕ ನೋಂದಣಿ ತಿದ್ದುಪಡಿ ವಿಧೇಯಕ ಮತ್ತು ನೋಟರಿ ಕರ್ನಾಟಕ ತಿದ್ದುಪಡಿ ವಿಧೇಯಕ ಈ 5 ವಿಧೇಯಕಗಳ ಅಂಕಿತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಷ್ಟ್ರಪತಿಯವರಿಗೆ ಮನವಿ ಮಾಡಿದರು

ಈ 5 ತಿದ್ದುಪಡಿ ವಿಧೇಯಕಗಳನ್ನು ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಅಂಗೀಕಾರ ಮಾಡಿ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗಿತ್ತು. ಆದರೆ, ರಾಜ್ಯಪಾಲರು ಈ ವಿಧೇಯಕಗಳಿಗೆ ಸಹಿ ಹಾಕಲು ನಿರಾಕರಿಸಿ ಅವುಗಳನ್ನು ರಾಷ್ಟ್ರಪತಿಗಳ ಅನುಮೋದನೆಗೆ ಕಳುಹಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ವಿಧೇಯಕಗಳ ಬಗ್ಗೆ ವಿವರ ನೀಡಿ ಒಪ್ಪಿಗೆ ನೀಡುವಂತೆ ಮನವಿ ಮಾಡಿದರು ಈ ಸಂದರ್ಭದಲ್ಲಿ ಸಚಿವರಾದ ಡಾ. ಎಚ್ ಸಿ ಮಾದೇವಪ್ಪ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಶಾಸಕ ಹಾಗೂ ಕಲ್ಯಾಣ ಕರ್ನಾಟಕ ಮಂಡಳಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಅಶೋಕ್ ಪಟ್ಟಣ ಮತ್ತಿತರರು ಇದ್ದರು

# ಪ್ರಥಮ ಚಿಕಿತ್ಸೆ ಕುರಿತು ರಾಜ್ಯಮಟ್ಟದ ಕಾರ್ಯಗಾರ

ದದಇಂತಹ ಸಮಯದಲ್ಲಿ 3ರಿಂದ 4 ನಿಮಿಷಗಳ ಒಳಗಾಗಿ ಬಂಗಾರದ ಕ್ಷಣವನ್ನು ಬಳಸಿಕೊಂಡು ಕೃತಕವಾಗಿ ಉಸಿರಾಟ ನೀಡಿದಲ್ಲಿ ಹಾಗೂ ಸಿ.ಪಿ.ಆರ್ ಪದ್ದತಿಯನ್ನು ಅನುಸರಿಸಿ ಮತ್ತೆ ಹೃದಯವು ಕಾರ್ಯ ನಿರ್ವಹಿಸುವಂತೆ ಮಾಡಬಹುದಾಗಿದೆ ಅದ್ದರಿಂದ ರೋಗಿಗಳಿಗೆ ವೈದ್ಯಕೀಯ ಸೇವೆ ಹಾಗೂ ಅಂಬ್ಯೂಲೇನ್ಸ್ ಸೇವಿ ದೊರೆಯುವ ಮುಂಚೆ ಸಿ,ಪಿ.ಆರ್. ನೀಡಿ ಜೀವ ಉಳಿಸುವುದಕ್ಕೆ ಸಾಧ್ಯವಿದೆ ಎಂದು ತಿಳಿಸಿದರು.

ಗದಗ್ ಡಿ.ಜಿ.ಎಂ. ಆಯುರ್ವೇದಿಕ್ ಮೆಡಿಕಲ್ ಕಾಲೇಜ್‌ನ ಉಪನ್ಯಾಸಕರಾದ ಡಾ.ಕುಮಾರ ಕಾಂತಿಮಠ ವಿದ್ಯಾರ್ಥಿಗಳಿಗೆ ಮೂಲಭೂತ ಜೀವರಕ್ಷಕ ವಿಧಾನಗಳು ಹಾಗೂ ಪ್ರಥಮ ಚಿಕಿತ್ಸೆ ಕುರಿತು ಹೆಚ್ಚಿನ ಮಾಹಿತಿ ನೀಡಿದರು.

ಜಿಲ್ಲೆಯ ವಿವಿಧ ಆಯುರ್ವೇದಿಕ್ ಮೆಡಿಕಲ್ ಕಾಲೇಜ್‌ನ ವೈದ್ಯ ವಿದ್ಯಾರ್ಥಿಗಳಿಗೆ ಕೃತಕ ಮಾನವ ಪ್ರತಿ ಕೃತಿ ಬಳಸಿ ಸಿ.ಪಿ.ಆರ್. ಪದ್ದತಿಯನ್ನು ಪ್ರಯೋಗಿಕವಾಗಿ ತಿಳಿಸಿಕೊಡಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಜೀವನೇಶ್ವರಯ್ಯ, ಉಪಪ್ರಾಂಶುಪಾಲರಾದ ಡಾ.ಸುಮಂಗಲ.ಹೆಚ್.ಎಂ,ಕಾಲೇಜಿನ ಆಡಳಿತಾಧಿಕಾರಿಗಳಾದ ವಿಶ್ವರಾಧ್ಯಸ್ವಾಮಿ, ಕೃತಿಯ ಲೇಖಕರಾದ ಡಾ.ಅಬುಜುಬೇರ್ ,ಡಾ.ಮೋಹನ್, ಗಂಗವಾತಿ ಸ್ಪೂರ್ತಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್‌ನ ಪ್ರಾಚಾರ್ಯರಾದ ಡಾ.ಬಸವರಾಜ ಎಸ್.ಸವಾದಿ, ಲಿಂಗಸೂಗೂರು ಸ್ವಾಮಿ ವಿವೇಕಾನಂದ ಆಯುರ್ವೇದಿಕ್ ಮೆಡಿಕಲ್ ಕಾಲೇಜ್‌ನ ಪ್ರಾಚಾರ್ಯರಾದ ಡಾ.ರಾಜಶೇಖರ ಪಾಟೀಲ್, ರಾಯಚೂರಿನ ಪೂರ್ಣಿಮ ಆಯುರ್ವೇದಿಕ್ ಮೆಡಿಕಲ್ ಕಾಲೇಜ್‌ನ ಪ್ರಾಚಾರ್ಯರಾದ ಡಾ.ಚಂದ್ರ ಶೇಖರ ರೆಡ್ಡಿ ಕಾರಮುಡಿ, ಡಾ.ಎಂ. ಪೃಥ್ವಿ ಕುಮಾರ ಡಾ. ಹಂಪಮ್ಮ,ಡಾ.ವೈಜಯಂತಿ,ಬಿ, ಡಾ.ರಾಜೇಶ್ವರಿ, ಡಾ.ಅಂಜುಂ ಸೇರಿದಂತೆ ವೈದ್ಯಕಾಲೇಜಿನ ಉಪನ್ಯಾಸಕರು,ವಿದ್ಯಾರ್ಥಿಗಳು ಇದ್ದರು.

# 'ಪ್ರತಿನಿತ್ಯ ಪ್ರತಿ ಸಾಮಾನ್ಯರಿಗೂ ಪಂಚಕರ್ಮ' ಕೃತಿ ಬಿಡುಗಡೆ

ಸವಾದಿ ಲಿಂಗಸೂ ಗೂರು ಸ್ವಾಮಿ ವಿವೇಕಾನಂದ ಆಯುರ್ವೇದಿಕ್ ಮೆಡಿಕಲ್ ಕಾಲೇಜ್‌ನ ಪ್ರಾಚಾರ್ಯರಾದ ಡಾ.ರಾಜಶೇಖರ ಪಾಟೀಲ್, ರಾಯಚೂರಿನ ಪೂರ್ಣಿಮ ಆಯುರ್ವೇದಿಕ್ ಮೆಡಿಕಲ್ ಕಾಲೇಜ್‌ನ ಪ್ರಾಚಾರ್ಯರಾದ ಡಾ.ಚಂದ್ರ ಶೇಖರ ರೆಡ್ಡಿ ಕಾರಮುಡಿ, ಡಾ.ಕುಮಾರ ಕಾಂತಿಮಠ,ಡಾ.ನೀರಾಜ ಲಕ್ಷ್ಮೀ , ಡಾ.ಎಂ. ಪೃಥ್ವಿ ಕುಮಾರ ಡಾ. ಹಂಪಮ್ಮ,ಡಾ.ವೈಜಯಂತಿ,ಬಿ, ಡಾ.ರಾಜೇಶ್ವರಿ, ಡಾ.ಅಂಜುಂ ಸೇರಿದಂತೆ ವೈದ್ಯಕಾಲೇಜಿನ ಉಪನ್ಯಾಸಕರು,ವಿದ್ಯಾರ್ಥಿಗಳು ಇದ್ದರು.

# ಮೂಲಭೂತ ಸೌಕರ್ಯ ಒದಗಿಸಲು ಕೆಆರ್‌ಎಸ್ ಪಕ್ಷದ ಕಾರ್ಯಕರ್ತರ ಒತ್ತಾಯ

ಸ್ವಚ್ಛ ವಾಗಿ ಮಾರ್ಪಡಿಸಬೇಕು. ಈ ಎಲ್ಲಾ ಸಾರ್ವಜನಿಕರ ಬೇಡಿಕೆಯನ್ನು ತಾವು ಜನಸಾಮಾನ್ಯರು ಕಟ್ಟುವ ತೆರಿಗೆಗೆ ನ್ಯಾಯ ಒದಗಿಸಿ ಎಂದರು.ಎಲ್ಲಾ ಮೂಲಭೂತ ಸೌಕರ್ಯ ಒದಗಿಸಲು ಸಾಧ್ಯವಾಗದಿದ್ದರೆ ಸಾರ್ವಜನಿಕರು ತಾವು ನೀಡುವುವಂತಹ ತೆರಿಗೆಯನ್ನು ಮುಂದಿನ ದಿನಗಳಲ್ಲಿ ನೀಡುವುದಿಲ್ಲ ಹಾಗೂ ಸಾರ್ವಜನಿಕ ಮೂಲಭೂತ ಸೌಕರ್ಯಕ್ಕಾಗಿ ಪುರಸಭೆ ಕಾರ್ಯಾಲಯದ ಮುಂದೆ ಪ್ರತಿಭಟನೆ ಮಾಡಬೇಕಾಗುತ್ತದೆ ಎಚ್ಚರಿಕೆ ನೀಡಿದರು.ಈ ಸಂದರ್ಭದಲ್ಲಿ ವಿಜಯ್ ಪೋಳ, ಬಸವಪ್ರಬು, ನಿರುಪಾದಿ ಕೆ. ಗೋಮರ್ಶೆ, ವಿಶ್ವನಾಥ ನಾಯ್ಡು ಸೇರಿದಂತೆ ಇದ್ದರು.

## ವಿಶ್ವ ಸಂಗೀತ ದಿನಾಚರಣೆ: ವಿಶೇಷ ಸಂಗೀತ ಕಾರ್ಯಕ್ರಮ

**ಕಲಬುರಗಿ,ಜೂ.24–**ದೇವಿಂದ್ರಪ್ಪ ಜಿ.ಸಿ.ಸಂಗೀತ ಸಾಹಿತ್ಯ ಕಲಾ ಸಂಸ್ಥೆ ಸಹಯೋಗದಲ್ಲಿ ವಿಶ್ವ ಸಂಗೀತ ದಿನಾಚರಣೆ ಹಾಗೂ ಲಿಂ.ಪಂ.ಪಂಚಾಕ್ಷರಿ ಗವಾಯಿಗಳವರ 81ನೇ ಪುಣ್ಯಸ್ಮರಣೆ ಮತ್ತು ಗಾನಯೋಗಿ ಪಂ. ಪುಟ್ಟರಾಜ ಗವಾಯಿಗಳವರ 15ನೇ ಪುಣ್ಯಸ್ಮರಣೆ ನಿಮಿತ್ಯವಾಗಿ ನಗರದ ಅಮೃತ ಪುಸ್ತಕ ಮಹಲಿನಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ ಜರುಗಿತು.

ಎನ್.ವಿ.ಡಿಗ್ರಿ ಕಾಲೇಜಿನ ನಿವೃತ್ತ ಪ್ರಾಚಾರ್ಯ ಡಾ.ಸ್ವಾಮಿರಾವ ಕುಲಕರ್ಣಿ ಕಾರ್ಯಕ್ರಮ ಉದ್ಘಾಟಿಸಿದರು. ಎಂಎಐ ಡಿಗ್ರಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಶಂಕರ ರೆಡ್ಡಿ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಸಂಗೀತ ಶಿಕ್ಷಕ ಗುರುಲಿಂಗಯ್ಯ ಸ್ವಾಮಿ ಮಠಪತಿ, ಹಿರಿಯ ವೈದ್ಯ ಡಾ.ಎಸ್.ಎಸ್. ಗುಬ್ಬಿ, ಖ್ಯಾತ ಗಜಲ್ ಗಾಯಕ ಬಸಯ್ಯ ಬಿ.ಗುತ್ತೇದಾರ, ಗುಲಬರ್ಗಾ



ವಿಶ್ವವಿದ್ಯಾಲಯದ ಅತಿಥಿ ಉಪ 'ನ್ಯಾಸಕ ಡಾ.ನಾಗರಾಜ ಪುರಂಕರ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ದೇವಿಂದ್ರಪ್ಪ ಜಿ.ಸಿ.ಸಂಗೀತ ಸಾಹಿತ್ಯ ಕಲಾ ಸಂಸ್ಥೆಯ ಅಧ್ಯಕ್ಷ ಸಿದ್ಧಾರ್ಥ ಡಿ.ಚಿಮ್ಮಾ ಇದ್ಲಾಯಿ ಉಪಸ್ಥಿತರಿದ್ದರು. ಶ್ರೀಧರ್ ಹೊಸಮನಿ ಪ್ರಾರ್ಥನಾಗೀತೆ ಹಾಡಿದರು.

# ಗರ್ಭನಿರೋಧಕ ಹೊಸ ಎಸ್.ಸಿ. ಅಂತರ ಇಂಜೆಕ್ಷನ್ ತರಬೇತಿಗೆ ಚಾಲನೆ



**ಯುವ ಮಾರ್ಗ ಸುದ್ದಿ**

**ರಾಯಚೂರು,ಜೂ.24–**ಹೊಸ ಗರ್ಭನಿರೋಧಕ ಕುರಿತು ವೈದ್ಯಾಧಿಕಾರಿಗಳು ಹಾಗೂ ಶ್ರೂಶಷಣಾಧಿಕಾರಿಗಳಿಗೆ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಇತ್ತೀಚೆಗೆ ತರಬೇತಿ ಕಾರ್ಯಕ್ರಮ ನಡೆಯಿತು.

ಬೆಂಗಳೂರಿನ ಕುಟುಂಬ ಕಲ್ಯಾಣ ವಿಭಾಗದ ಉಪ ನಿರ್ದೇಶಕರಾದ ಡಾ.ಚಂದ್ರಿಕಾ ಬಿ. ಆರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ತಾಯಿ ಮತ್ತು ಮಕ್ಕಳ ಆರೋಗ್ಯ ಸರಿಯಾಗಿರಲು ಕುಟುಂಬ ಕಲ್ಯಾಣ ಕಾರ್ಯಕ್ರಮ ಅವಶ್ಯಕತೆಯಿದೆ. ಒಂದು ಮಗುವಿನಿಂದ ಮತ್ತೊಂದು ಮಗುವಿನ ಹೆರಿಗೆ ನಡುವೆ ಅಂತರ ಕಡಿಮೆ ಇದ್ದಲ್ಲಿ ಅದರಿಂದ ಮಹಿಳೆಯರಿಗೆ ರಕ್ತಹಿನ್ನತೆಯಾಗಿ ತಾಯಿ ಹಾಗೂ ಶಿಶುವಿನ ಜೀವಕ್ಕೆ ಆಪಾಯವಾಗುವುದನ್ನು ತಡೆಗಟ್ಟಲು ಅಂತರ ಇಂಜೇಕ್ಷನ್ ಬಳಸುವುದು ಅತ್ಯಂತ ಪ್ರಯೋಜನಕಾರಿಯಾಗಿದೆ ಎಂದು ತಿಳಿಸಿದರು. ಹೆರಿಗೆಯಾದ 6 ವಾರಗಳ ನಂತರ ಈ ಇಂಜೇಕ್ಷನ್ ಪಡೆಯಬಹುದಾಗಿದೆ. ಇದರಿಂದ ಒಂದು ಮಗುವಿನಿಂದ ಮತ್ತೊಂದು ಮಗುವಿಗಾಗಿ ಗರ್ಭಧರಿಸಲು ಅಂತರವನ್ನು ಕಾಪಾಡಿಕೊಳ್ಳಲು ತುಂಬಾ ಉಪಯುಕ್ತವಾಗಿದೆ. ಈ ಅಂತರದ ಇಂಜೆಕ್ಷನ್ ಅನ್ನು ಪ್ರತಿ 3 ತಿಂಗಳಿಗೆ ಒಂದು ಬಾರಿ ಮಾಡಿಸಿಕೊಳ್ಳಬೇಕೆಂದರು.

ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆಯಾದ ಅರ್ಹ ಫಲಾನುಭವಿಗಳ ಪೈಕಿ ಸಾಂಕೇತಿಕವಾಗಿ 6 ಜನ ತಾಯಂದಿರರಿಗೆ ಇಂಜೆಕ್ಷನ್ ನೀಡಲಾಯಿತು. ನಂತರ ವೈದ್ಯಾಧಿಕಾರಿಗಳಿಗೆ ಹಾಗೂ ಶುಶ್ರೂಷಣಾಧಿಕಾರಿಗಳಿಗೆ ಅಂತರ ಇಂಜೆಕ್ಷನ್ ಕುರಿತು ತರಬೇತಿ ನೀಡಲಾಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಪ್ರಾಸ್ತಾವಿಕ ಮಾತನಾಡಿ, ಕುಟುಂಬ ಕಲ್ಯಾಣ ಯೋಜನೆಯ ವಿಧಾನಗಳಾದ ತಾತ್ಕಾಲಿಕ ವಿಧಾನದ ಇಂಜೆಕ್ಷನ್ ತುಂಬಾ ಸರಳ ಮತ್ತು ಸುರಕ್ಷಿತವಾಗಿದೆ. ಮಹಿಳೆಯರು ಇದನ್ನು ಪಡೆಯುವುದರಿಂದ ಅಂತರದ ಹೆರಿಗೆ ಕಾಪಾಡಬಹುದು. ಇದರಿಂದ ತಾಯಿ ಮತ್ತು ಮಗು ಕ್ಷೇಮವಾಗಿರುತ್ತಾರೆ. ಇದನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ. ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಾಯಂದಿರಿಗೆ ಸಲಹೆ ಮಾಡಿದರು.

ಇದೇ ಸಂದರ್ಭದಲ್ಲಿ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಶಿವಕುಮಾರ, ಸ್ತ್ರೀರೋಗ ತಜ್ಞರಾದ ಶ್ರೀಲತಾ ಪಾಟೀಲ್, ಡಾ.ಮಯಾಂಕ, ಸಲಹೆಗಾರರಾದ ಸತೀಶ್ ಸೇರಿದಂತೆ ಆರೋಗ್ಯ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತರು ಇದ್ದರು.

# ಬೆಂಗಳೂರಲ್ಲಿ ಪುಂಡರ ಹಾವಳಿ ಹೆಚ್ಚಳ : ದೌರ್ಜನ್ಯ ಸಹಿಸುವುದಿಲ್ಲ ಎಂದ ಗೃಹ ಸಚಿವ ಪರಮೇಶ್ವರ್



**ಬೆಂಗಳೂರು,ಜೂ.24–** ಆನೇಕಲ್‌ನ ಮೈಲಸಂದ್ರದಲ್ಲಿ ಪುಂಡರ ಗುಂಪೊಂದು ಮಹಿಳೆಯ ಮೇಲೆ ದೌರ್ಜನ್ಯ ಎಸಗಿದ ಪ್ರಕರಣ ವನ್ನು ಗಂಭೀರವಾಗಿ ತೆಗೆದು ಕೊಂಡಿದ್ದು, ಇಂತಹ ಕೃತ್ಯಗಳನ್ನು ಸರ್ಕಾರ ಸಹಿಸುವುದಿಲ್ಲ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂತಹ ಘಟನೆಗಳ ವಿರುದ್ಧ ಕ್ರಮ ಕೈಗೊಳ್ಳುವ ಸಲುವಾಗಿಯೇ ಪೊಲೀಸ್ ಇಲಾಖೆ ಇದೆ. ಈಗಾಗಲೇ ಆರೋಪಿಗಳನ್ನು ಬಂಧಿಸಲಾಗಿದೆ. ಸಮಾಜ ದಲ್ಲಿ ಇಂತಹ ಕೃತ್ಯಗಳನ್ನು ತೀವ್ರವಾಗಿ ಪರಿಗಣಿಸಲಾಗುತ್ತದೆ ಎಂದರು.ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತದ ಪ್ರಕರಣದಲ್ಲಿ ಪೊಲೀಸರ ವೈಫಲ್ಯಗಳಿವೆ ಎಂಬ ವರದಿಯ ಬಗ್ಗೆ ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ, ಅದನ್ನು ಪರಿಶೀಲಿಸಿ ನಂತರ ಪ್ರತಿಕ್ರಿಯಿ ಸುವುದಾಗಿ ತಿಳಿಸಿದರು.

ಅನಂತ ಕುಮಾರ್ ಹೆಗಡೆ ಹಲ್ಲೆ ಮಾಡಿಲ್ಲ: ಮಾಜಿ ಕೇಂದ್ರ ಸಚಿವ ಅನಂತಕುಮಾರ್ ಹೆಗಡೆ ಮತ್ತು ಅವರ ಬೆಂಬಲಿಗರಿಂದ ಕುಟುಂಬವೊಂದರ ಮೇಲೆ ಹಲ್ಲೆಯಾಗಿರುವ ಬಗ್ಗೆ ಸಂಪೂರ್ಣ ತನಿಖೆಯಾಗಬೇಕಿದೆ. ಹೆದ್ದಾರಿಯಲ್ಲಿ ಬರುವಾಗ ತಮ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಸಲಾನ್ ಮತ್ತು ಅವರ ಕುಟುಂಬದವರು ದೂರು ನೀಡಿದ್ದಾರೆ. ಅನಂತ್‌ಕುಮಾರ್ ಹೆಗಡೆ ಹಲ್ಲೆ ಮಾಡಿಲ್ಲ. ಡ್ರೈವರ್ ಹಾಗೂ ಗನ್‌ಮ್ಯಾನ್ ಹಲ್ಲೆ ಮಾಡಿದ್ದಾರೆ. ಅನಂತ ಕುಮಾರ್ ಹೆಗಡೆ ಹಲ್ಲೆಗೆ ಪ್ರಚೋದನೆ ನೀಡಿದ್ದರೆ ಎಂಬ ಬಗ್ಗೆ ಪರಿಶೀಲನೆ ನಡೆಸುವುದಾಗಿ ಪೊಲೀಸರು ತಮಗೆ ವಿವರಣೆ ನೀಡಿದ್ದಾರೆ. ತನಿಖೆಯಲ್ಲಿ ಯಾವ ಅಂಶಗಳು ಬೆಳಕಿಗೆ ಬರುತ್ತದೆ ಎಂಬುದನ್ನು ಕಾದುನೋಡುವುದಾಗಿ ಹೇಳಿದರು.

**ಸರ್ಕಾರ ದಿವಾಳಿಯಾಗಿಲ್ಲ :** ಸರ್ಕಾರಿ ಕಾಮಗಾರಿಗಳಿಗೆ ಹಣ ಇಲ್ಲ ಎಂದು ನಾನು ಹೇಳಿರುವುದಾಗಿ ತಪ್ಪಾಗಿ ಅರ್ಥೈಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ 4.9 ಲಕ್ಷ ಕೋಟಿ ರೂ. ಬಜೆಟ್ ಮಂಡಿಸಿದ್ದಾರೆ. ಯಾವುದಕ್ಕೂ ಹಣದ ಕೊರತೆ ಇಲ್ಲ ಎಂದರು. ನೀರಾವರಿಗೆ 22 ಸಾವಿರ ಕೋಟಿ ರೂ., ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 50 ಕೋಟಿ ರೂ. ಗಳ ಕ್ರಿಯಾಯೋಜನೆ ತಯಾರಿಸಲು ಸೂಚನೆ ನೀಡಲಾಗಿದೆ. ಇದೆಲ್ಲವನ್ನೂ ನಾನು ನನ್ನ ಭಾಷಣದಲ್ಲಿ ಉಲ್ಲೇಖಿಸಿದ್ದೇನೆ. ವೇದಿಕೆಯಲ್ಲಿ ಯಾರೋ ಮಾತನಾಡುವಾಗ ನಾನು ತಮಾಷೆಯಾಗಿ ಪ್ರತಿಕ್ರಿಯಿಸಿದ್ದೇನೆ. ನಾನು ಅಧಿಕೃತವಾಗಿ ಮಾತನಾಡುತ್ತಿದ್ದೇನೆ. ನಮ ಸರ್ಕಾರದಲ್ಲಿ ಹಣಕಾಸಿನ ತೊಂದರೆ ಇಲ್ಲ. ಆರ್ಥಿಕ ಮುಗ್ಗಟ್ಟು ಇಲ್ಲ ಎಂದು ಸ್ಪಷ್ಟಪಡಿಸಿದ್ದೇನೆ ಎಂದು ಹೇಳಿದರು.ಒಂದು ಕಾಮಗಾರಿ ಎಂದರೆ ವಿಸ್ತೃತ ಯೋಜನೆ ತಯಾರಿಸಬೇಕು. ಅದರಿಂದ ವಿಳಂಬವಾಗಬಹುದು, ಹಣ ಬಿಡುಗಡೆಯಲ್ಲೂ ತಡವಾಗಬಹುದು. ಅದರ ಹೊರತುಪಡಿಸಿ ಯಾವುದೇ ಹಣಕಾಸಿನ ತೊಂದರೆ ನಮ ಸರ್ಕಾರದಲ್ಲಿಲ್ಲ ಎಂದು ಸ್ಪಷ್ಟವಾಗಿ ಪುನರುಚ್ಚರಿಸುತ್ತೇನೆ ಎಂದು ಒತ್ತಿ ಹೇಳಿದರು.

ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿದರೆ ಮತ್ತೊಮ್ಮೆ ಪುನರುಚ್ಚರಿಸುತ್ತೇನೆ. ಕೆಲ ಶಾಸಕರು ಹೇಳುತ್ತಿರುವ ಹೇಳಿಕೆಗಳನ್ನು ಗಮನಿಸಿದ್ದೇನೆ. 25 ಕೋಟಿ ರೂ. ಯೋಜನೆಗೆ ಹಣ ಬಿಡುಗಡೆಯಾಗಿಲ್ಲ ಎಂದು ರಾಜು ಕಾಗೆ ಹೇಳಿದ್ದಾರೆ. ಅದಕ್ಕೆ ಯೋಜನೆ ತಯಾರಿಕೆಯ ವಿಳಂಬ ಕಾರಣವೇ ಹೊರತು, ಹಣಕಾಸಿನ ಕೊರತೆ ಅಲ್ಲ. ಮನಸ್ಸಿಗೆ ಬೇಜಾರಾದಾಗ ಕೆಲ ಮಾತುಗಳು ಬರುತ್ತವೆ. ಅದೇ ರೀತಿ ರಾಜು ಕಾಗೆ ಮಾತನಾಡಿದ್ದಾರೆ. ಅದನ್ನು ಸರಿಪಡಿಸಬಹುದು ಎಂದರು. ಇಂತಹ ವಿಚಾರಗಳಿಗೆ ಪರಮೇಶ್ವರ್ ಮುಂದಾಳತ್ವ ವಹಿಸುತ್ತಾರೆ ಎಂದು ಶಾಸಕ ಬಸವರಾಜರಾಯರೆಡ್ಡಿ ಹೇಳಿರುವ ಹೇಳಿಕೆಗೆ 'ನಮಸ್ಕಾರ' ಎಂದು ಪರಮೇಶ್ವರ್ ಕೈ ಮುಗಿದು ಪ್ರತಿಕ್ರಿಯಿಸಿದರು.

# ಸಂಗೀತದಿಂದ ಆಧ್ಯಾತ್ಮದ ಸಾಧನೆ

**ಕಲಬುರಗಿ,ಜೂ.24–**ಸಂಗೀತದಿಂದ ಆಧ್ಯಾತ್ಮಿಕ ಸಾಧನೆ ಮತ್ತು ಒಲವು ಪ್ರಾಪ್ತವಾಗುತ್ತದೆ ಎಂದು ರವೀಂದ್ರ ಗುತ್ತೇದಾರ್ ನುಡಿದರು ಕಲ್ಬುರ್ಗಿ ನಗರದ ಗ್ರೀನ್ ಪಾರ್ಕ್. ದಕ್ಷಿಣ ಮುಖಿ ಹನುಮಾನ್ ದೇವಸ್ಥಾನದ ಪ್ರಾಂಗಣದಲ್ಲಿ ಪಂಡಿತ್ ಪುಟ್ಟರಾಜ ಸಾಂಸ್ಕೃತಿಕ ಸೇವಾ ಸಂಘ ಕಲ್ಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಸ್ವರ ಶ್ರದ್ಧಾಂಜಲಿ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಾ ತತ್ವಪದ ವಚನ ಗಾಯನ ಇವೆಲ್ಲವುದರಗಳಲ್ಲಿ ಆಧ್ಯಾತ್ಮಿಕ ಕಡೆಗೆ ಒಲವು ಹಾಗೂ ಮಾನಸಿಕ ತೃಪ್ತಿ ದೊರೆಯುತ್ತದೆ ಸಂಗೀತ ಸಾಧನೆಯಿಂದ ಹೃದಯ ವೈಶಾಲ್ಯತೆ ಬೆಳೆಯುತ್ತದೆ ಎಂದು ಅವರು ನುಡಿದರು ಮಲಕಾರಿ ಪೂಜಾರಿ ಅಧ್ಯಕ್ಷತೆ ವಹಿಸಿದರು ಮುಖ್ಯ ಅತಿಥಿಗಳಾದ ಕರ್ವಸ್ರಯ್ಯ ಸ್ವಾಮಿ.ಶಿವಪ್ಪ ಕಟ್ಟಿಮನಿ. ಸಂತೋಷ್ ಭೂಪಾಲ್. ಶಿವಕಾಂತ್ ಚುಮ್ಮಾ ದಿಗಂಬರ್ ಕುಲಕರ್ಣಿ ಶ್ರೀಮತಿ ನಾಗಮ್ಮ. ಶ್ರೀಮತಿ ಉಮಾದೇವಿ ಶ್ರೀ ರಾಮದಾಸ್ ಪಾಟೀಲ್ ಇದ್ದರು

ಸ್ವರದಾಂಜಲಿ ಸಂಗೀತ ಕಾರ್ಯಕ್ರಮದಲ್ಲಿ ಅನೇಕ ಹಿರಿಯ ಕಲಾವಿದರು ಗಳಾದ ಸೈದಪ್ಪ ಚೌಡಾಪುರ್. ಗುರುಶಾಂತಯ್ಯ ಸ್ವಾಮಿ ಸ್ಥಾವರ ಮಠ. ತೋಟಯ್ಯ ಶಾಸ್ತ್ರಿಗಳು. ಶ್ರೀಮತಿ ಪವಿತ್ರ. ವಿನೋದ್ ದಸ್ತಪುರ್. ವೀರಭದ್ರಯ್ಯ ಸ್ಥಾವರಮಠ ಹಾಗೂ ಮೌನೇಶ್ ಪಂಚಾಲ್ ತಬ್ಲಾ ಸಾತ್ ನೀಡಿದರು ವಿಜ್ರಮಣೆಯಿಂದ ಈ ಎಲ್ಲ ಕಲಾವಿದರಿಂದ ಸಂಗೀತ ಜರುಗಿತು. ಸಂಸ್ಥೆಯ ಅಧ್ಯಕ್ಷರಾದ ರಾಚಯ್ಯ ಸ್ವಾಮಿ ರಟಕಲ್ ಅವರು ಸರ್ವರನ್ನು ಸ್ವಾಗತಿಸಿ ವಂದನಾರ್ಪಣೆ ಗೈದರು

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

ಯುವ ಮಾರ್ಗ



# ಅನುದಾನ ಇಲ್ಲ, ನಾನು ಶಾಸಕನಾಗಿ ಕೆಲಸ ಮಾಡೋಕೆ ಆಗ್ತಿಲ್ಲ: ಕಾಂಗ್ರೆಸ್ ಶಾಸಕ ಬೇಸರ

**ಚಿತ್ರದುರ್ಗ, ಜೂ.24–** ನಾನು ಶಾಸಕನಾಗಿ ಕೆಲಸ ಮಾಡೋಕೆ ಆಗುತ್ತಿಲ್ಲ ಎಂದು ಮೊಳಕಾಲ್ಮೂರು ಶಾಸಕ ಎನ್‌ವೈ ಗೋಪಾಲಕೃಷ್ಣ ಅಸಮಧಾನ ಹೊರಹಾಕಿದ್ದಾರೆ. ಅನುದಾನ ತಾರತಮ್ಯವಿರುದ್ಧ ಬೇಸರ ವ್ಯಕ್ತಪಡಿಸಿದ ಅವರು ಒಂದು ಚರಂಡಿ, ರಸ್ತೆ ಹಾಗೂ ಶಾಲೆ ನಿರ್ಮಿಸಲಾಗುತ್ತಿಲ್ಲ ಎಂದಿದ್ದಾರೆ.

ತಾಲೂಕಿನ ಕಣಕುಪ್ಪೆ ಗ್ರಾಮದಲ್ಲಿ ಖಾಸಗಿ ಕಂಪನಿ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ನಾನು ಶಾಸಕನಾಗಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಆಗುತ್ತಿಲ್ಲ ಸರ್ಕಾರ ಸರಿಯಾಗಿ ಅನುದಾನ ನೀಡಲ್ಲ, ಕೆಲಸಗಲು ನಡೆಯುತ್ತಿಲ್ಲ ಎಂದು ಪರೋಕ್ಷವಾಗಿ ಅಸಹಾಯಕತೆ ಹೊರಹಾಕಿದರು.

ಬಂದು ಖಾಸಗಿ ಕಂಪನಿಯವರೇನು ಮಾಡುತ್ತಾರೆಂದು ವ್ಯಂಗ್ಯವಾಡಿದರು ಈ ಗಡಿಭಾಗದಲ್ಲಿ ಆರಂಭಿಸುತ್ತಿರುವ ಖಾಸಗಿ ಕಂಪನಿಯವರಿಗೇನು ಮೂರ್ಖತನವೊ ತಿಳಿಯದು.



ಇಂತಹ ಸಮಯದಲ್ಲಿ ಈ ಭಾಗದಲ್ಲಿ ಇನ್ನು ಈ ಖಾಸಗಿ ಕಂಪನಿಯವರು ನನ್ನನ್ನು ಸಹ ಕುಟುಂಬ ಸದಸ್ಯ ಎಂದುಕೊಳ್ಳಿ.

ಹೀಗೆ ಹೇಳಿದ ಮಾತ್ರಕ್ಕೆ ಶೇರ್ ಹೋಲ್ಡರ್ ಎಂದು ಕೊಳ್ಳಬೇಡಿ. ನಾನು ಉಚಿತ ಸೇವೆ ಮಾಡುವವನು ಎಂದು ಶಾಸಕ ಮಾತನಾಡಿರುವ ವೀಡಿಯೋ ಎಲ್ಲೆಡೆ ವೈರಲ್ ಆಗಿದೆ.

# ಮನೆ ಹಂಚಿಕೆಗೆ ಲಂಚ, ಜಮೀರ್ ನಿರಾಕರಣೆ

**ಬೆಂಗಳೂರು, ಜೂ. 24–** ವಸತಿ ಯೋಜನೆ ಇಲಾಖೆಯಲ್ಲಿ ಮನೆಗಳ ಹಂಚಿಕೆಗೆ ದುಡ್ಡು ಪಡೆಯಲಾಗುತ್ತಿದೆ ಎಂಬ ಶಾಸಕ ಬಿ.ಆರ್. ಪಾಟೀಲ್ ರವರ ಆರೋಪವನ್ನು ತಳ್ಳಿ ಹಾಕಿರುವ ವಸತಿ ಸಚಿವ ಜಮೀರ್ ಅಹಮದ್ ಖಾನ್, ಬಿ.ಆರ್. ಪಾಟೀಲ್ ಅವರು ಯಾವ ಅರ್ಥದಲ್ಲಿ ಈ ರೀತಿ ಹೇಳಿದ್ದಾರೋ ಗೊತ್ತಿಲ್ಲ. ಬಡವರ ಮನೆಗಳ ಹಂಚಿಕೆಯಲ್ಲಿ ದುಡ್ಡು ತೆಗೆದು ಕೊಂಡರೆ ನಮ್ಮ ಕುಟುಂಬಕ್ಕೆ ಒಳ್ಳೆಯದಾಗುತ್ತದೆಯೇ, ಆ ರೀತಿ ದುಡ್ಡು ತೆಗೆದುಕೊಂಡರೆ ಅವರ ಮಕ್ಕಳು ಹುಳ ಬಿದ್ದು ಸಾಯುತ್ತಾರೆ ಎಂದು ಭಾವುಕರಾದರು.

ಬೆಂಗಳೂರಿನ ತಮ್ಮ ಅಧಿಕೃತ ನಿವಾಸ ’ದಲ್ಲಿಂದು ಸುದ್ದಿಗೋ ಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಬಿ.ಆರ್. ಪಾಟೀಲ್ ಹಿರಿಯರು. ಅವರ ಆರೋಪದ ಬಗ್ಗೆ ತನಿಖೆಯಾಗಲಿ. ಅವರು ನನ್ನ ಹೆಸರನ್ನು ಪ್ರಸ್ತಾಪಿಸಿಲ್ಲ. ನಾನು ಆರೋಪಿ ಎಂದು ಸಾಬೀತಾದರೆ 24 ಗಂಟೆಯೊಳಗೆ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರು.

ನಾನು ಸತ್ಯ ಹರಿಶ್ಚಂದ್ರನೆಂದು ಹೇಳುತ್ತಿಲ್ಲ. ಆದರೆ ಬಡವರ ದುಡ್ಡು ಹೊಡೆಯುವಷ್ಟು ದಾರಿದ್ರ್ಯ ನನಗೆ ಬಂದಿಲ್ಲ ಎಂದು ಹೇಳಿದರು.ಯಾರು ದುಡ್ಡು ಪಡೆದು ಮನೆ ಕೊಟ್ಟಿದ್ದಾರೆ ಎಂಬ ಬಗ್ಗೆ ಸಾಕ್ಷ್ಯಗಳನ್ನು ಕೊಡಬೇಕು. ಆ ಬಗ್ಗೆ ತನಿಖೆಯಾಗಲಿ. ಬಿ.ಆರ್. ಪಾಟೀಲ್ ಸಚಿವರು ಹಣ ಪಡೆದಿದ್ದಾರೆ ಎಂದು ಆರೋಪ ಮಾಡಿಲ್ಲ. ಯಾರು ಹಣ ಪಡೆದಿದ್ದಾರೋ ಎಲ್ಲದರ ಬಗ್ಗೆಯೂ ತನಿಖೆಯಾಗಲಿ. ನಾನು ಯಾರ ಬಳಿಯೂ ಹಣ ಪಡೆದು ಮನೆ ಕೊಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು.

ಬಡವರ ಹಣ ಪಡೆದು ಮನೆ ನೀಡಿದರೆ ನಮ್ಮ ಕುಟುಂಬಕ್ಕೆ, ನಮ್ಮ ಮಕ್ಕಳಿಗೆ ಒಳ್ಳೆಯದಾಗುತ್ತಾ, ಯಾರೇ ದುಡ್ಡು ಪಡೆದು ಮನೆ ಕೊಟ್ಟಿದ್ದರೆ ಹುಳ ಬಿದ್ದು ಸಾಯುತ್ತಾರೆ ಎಂದು ಜಮೀರ್ ಪುನರುಚ್ಚರಿಸಿದರು.

ಬಡವರ ಮನೆ ವಿಚಾರದಲ್ಲಿ ನಾನು ಹಣ ಪಡೆದಿದ್ದರೆ ನನ್ನ ಮಕ್ಕಳಿಗೆ ಶಾಪ ತಟ್ಟಲಿ. ಮನೆ ಹಂಚಿಕೆಯಲ್ಲಿ ಭ್ರಷ್ಟಾಚಾರ ನಡೆದಿರುವುದರಲ್ಲಿ ನನ್ನ ಕೈವಾಡ ಇರುವುದು ಸಾಬೀ ತಾದರೆ ನಾನೇ ರಾಜೀನಾಮೆ ನೀಡುತ್ತೇನೆ. ಬಿಜೆಪಿಗರು ಹೇಳುವುದೇ ಬೇಡ. ಆರೋಪ ಸಾಬೀತಾದರೆ ನಾನೇ ರಾಜೀನಾಮೆ ಕೊಡುತ್ತೇನೆ ಎಂದರು.

ನಾನು ದುಡ್ಡು ಪಡೆದು ಮನೆ ಕೊಟ್ಟಿರುವುದನ್ನು ಬಿಜೆಪಿಯ ವರು ಸಾಬೀತು ಮಾಡಲಿ, ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದು ಸವಾಲು ಹಾಕಿದ ಅವರು, ಈ ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ ಬಡವರಿಗೆ ಮನೆ ಕೊಡಲಿಲ್ಲ. ನಾನು ಬಂದ ಮೇಲೆ ಮನೆ ಹಂಚಿಕೆ ಮಾಡುತಿದ್ದೇನೆ. ಇವತ್ತು ಬಿಜೆಪಿಯವರು ಬಡವರ ಪರವಾಗಿ ಮಾತನಾಡುತ್ತಿ ದ್ದಾರೆ ಎಂದು ಹರಿಹಾಯ್ದರು.ಶಾಸಕ ಬಿ.ಆರ್. ಪಾಟೀಲ್ ಆರೋಪದ ಬಗ್ಗೆ ಇಲಾಖೆ ತನಿಖೆ ನಡೆಸುತ್ತಿದ್ದೇನೆ. ಬಡವರಿಂದ ಹಣ ಪಡೆಯುವಷ್ಟು ದಾರಿದ್ರ್ಯ ನನಗೆ ಬಂದಿಲ್ಲ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ನನ್ನ ಜತೆ ದೂರವಾಣಿಯಲ್ಲಿ ಮಾತ ನಾಡಿದ್ದಾರೆ. ನಾನು ನಮ್ಮ ಇಲಾಖೆಯು ಎಲ್ಲ ಮಾಹಿತಿಗಳನ್ನು ಕೊಟ್ಟಿದ್ದೇನೆ. ಬಿ.ಆರ್. ಪಾಟೀಲ್ ಆರೋಪ ಸಂಬಂಧ ಮುಖ್ಯಮಂತ್ರಿಗಳಿಗೆ ವಿವರಣೆಯನ್ನು ಕೊಟ್ಟಿದ್ದೇನೆ ಎಂದು ಹೇಳಿದರು.

ಕಳೆದ 4 ವರ್ಷಗಳಿಂದ ಹೊಸ ಮನೆಗಳನ್ನು ಕೊಟ್ಟಿಲ್ಲ. ಈಗ 9 ಲಕ್ಷ ಮನೆಗಳ ನಿರ್ವಾಣವಾಗುತ್ತಿದೆ. ಪಂಚಾಯಿತಿ ಮಟ್ಟದಲ್ಲಿ ಭ್ರಷ್ಟಾಚಾರ ನಡೆದರೆ ನಮಗೆ ಹೇಗೆ ಗೊತ್ತಾಗುತ್ತದೆ. ಈ ಬಗ್ಗೆ ಪಾಟೀಲ್ ರವರೇ ಹೇಳಬೇಕು ಎಂದು ಜಮೀರ್ ಅಹಮದ್ ಖಾನ್ ಹೇಳಿದರು.

ಈ ಹಿಂದೆ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಯಾದಾಗ ಬಡವರಿಗೆ 14 ಲಕ್ಷ ಮನೆಗಳನ್ನು ಹಂಚಿಕೆ ಮಾಡಿದ್ದರು. ನಾವು ಕಳೆದ 2 ವರ್ಷದಲ್ಲಿ 5.8 ಲಕ್ಷ ಮನೆಗಳನ್ನು ನೀಡಿದ್ದೇವೆ. ಮನೆಗಳ ಹಂಚಿಕೆಗೆ ಶಾಸಕರಿಂದ ಬಹಳ ಒತ್ತಡ ಇತ್ತು. ಇದನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದೆ. ಆಗ ಮುಖ್ಯಮಂತ್ರಿಗಳು 1.20 ಲಕ್ಷ ಅನುದಾನದ ಬದಲು 3.5 ಲಕ್ಷ ಅನು ದಾನ ಕೊಡಲು ಒಪ್ಪಿದರು. ಒಂದು ಮನೆ ಕಟ್ಟ ಬೇಕಾದರೆ 7.5 ಲಕ್ಷ ಆಗುತ್ತದೆ. 1.5 ಲಕ್ಷ ಕೇಂದ್ರದಿಂದ ಬರುತ್ತದೆ. ಅದಕ್ಕೆ ಜಿಎಸ್‌ಟಿ ಹಾಕಿ ಮತ್ತೆ 1.3 ಲಕ್ಷ ವಾಪಸ್ ಪಡೆಯುತ್ತಾರೆ ಎಂದು ದೂರಿದರು.

ನಾನು ವಸತಿ ಸಚಿವನಾದ ಮೇಲೆ ಎಲ್ಲ ಶಾಸಕರಿಗೂ ಮನೆ ಹಂಚಿದ್ದೇನೆ. ಬಿ.ಆರ್. ಪಾಟೀಲ್ ಅವರು 2 ಸಾವಿರ ಮನೆಗಳನ್ನು ಕೇಳಿದ್ದರು. ನಾವು 950 ಮನೆಗಳನ್ನು ಕೊಟ್ಟಿದ್ದೇವೆ. ಚನ್ನಪಟ್ಟಣಕ್ಕೆ 5 ಸಾವಿರ ಮನೆ ಕೊಟ್ಟಿದ್ದೇನೆ. ರಾಮನಗರ ಜಿಲ್ಲೆಗೆ 3 ಸಾವಿರ ಮನೆ ಕೊಟ್ಟಿದ್ದೇನೆ ಎಂದು ಜಮೀರ್ ಅಹಮದ್ ಖಾನ್ ಮನೆ ಹಂಚಿಕೆಯ ವಿವರಗಳನ್ನು ಸುದ್ದಿ ಗೋಷ್ಠಿಯಲ್ಲಿ ವಿವರಿಸಿದರು.

# ಸಾರ್ವಕಾಲಿಕ ಗರಿಷ್ಠ ದರ ತಲುಪಿದ ಬೆಲೆ ಕೊಬ್ಬರಿ ಕ್ವಿಂಟಾಲ್‌ಗೆ 26 ಸಾವಿರ ರೂ

**ತುಮಕೂರು, ಜೂ.24–** ಕೊಬ್ಬರಿ ಬೆಲೆ ನಾಗಲೋಟದಲ್ಲಿ ಓಡುತ್ತಿದ್ದು, ಕ್ವಿಂಟಾಲ್‌ಗೆ ಬರೋಬ್ಬರಿ 26 ಸಾವಿರ ರೂ. ಗೆ ಮಾರಾಟವಾಗುವ ಮೂಲಕ ಸಾರ್ವಕಾಲಿಕ ಗರಿಷ್ಠ ದರ ದಾಖಲಿಸಿದೆ.

ಈ ಬಾರಿ ತೆಂಗು ಬೆಳೆಗಾರರು ನಿರೀಕ್ಷಸದ ಮಟ್ಟದಲ್ಲಿ ಕೊಬ್ಬರಿ ಬೆಲೆ ದಿನದಿಂದ ದಿನಕ್ಕೆ ಏರುತ್ತಲೇ ಇದ್ದು, ಬೆಳೆಗಾರರಿಗೆ ಸೋಜಿಗ ಎನಿಸಿದೆ. ಕಲ್ಪತರು ನಾಡು ತುಮಕೂರಿನಲ್ಲಿ ತೆಂಗು ಇಳುವರಿ ಈ ಬಾರಿ ಗಣನೀಯವಾಗಿ ಇಳಿಮುಖವಾಗಿದೆ.ಇಳುವರಿಯಿಲ್ಲದೆ ರೈತರು ಬೆಲೆ ಕೇಳಿಯಷ್ಟೇ ಖುಷಿ ಪಡುವಂತಾಗಿದೆ. ನಿನ್ನೆ ತಿಪಟೂರು ಮಾರುಕಟ್ಟೆಗೆ 3,351 ಕ್ವಿಂಟಾಲ್ ಕೊಬ್ಬರಿ ಬಂದಿದ್ದು, ಸರಾಸರಿ 25,300 ರೂ.ನಂತೆ ಮಾರಾಟವಾಗಿದೆ.

ಕನಿಷ್ಠ ದರ 23 ಸಾವಿರ ಹಾಗೂ ಗರಿಷ್ಠ ದರ 26,167 ರೂ.ಗೆ ಮಾರಾಟವಾಗಿದೆ. ತೆಂಗಿನಕಾಯಿ ಬೆಲೆ ತುಸು ಇಳಿದಿದ್ದು, ಕೊಬ್ಬರಿ ಬೆಲೆ ಮಾತ್ರ ನಿರಂತರವಾಗಿ ಏರುತ್ತಲೇ ಇದೆ. ಕೊಬ್ಬರಿ ಎಣ್ಣೆಗೂ ಕೂಡ ಉತ್ತಮ ಬೆಲೆ ಬಂದಿದ್ದು, ಮಾರುಕಟ್ಟೆಯಲ್ಲಿ 15 ಕೆ.ಜಿ. ಕೊಬ್ಬರಿ ಎಣ್ಣೆಗೆ 5,500 ರೂ.ಗೆ ಮಾರಾಟವಾಗುತ್ತಿದೆ.

ಕಳೆದ ಒಂದು ತಿಂಗಳಿನಿಂದ 600 ರೂ. ಬೆಲೆ ಹೆಚ್ಚಳವಾಗಿದೆ. ಕಲ್ಪವೃಕ್ಷದ ಪ್ರತಿಯೊಂದು ವಸ್ತುವೂ ಕೂಡ ಉಪಯೋಗಕ್ಕೆ ಬರುತ್ತದೆ ಎಂಬುದು ಪ್ರಸ್ತುತ ಸಂದರ್ಭದಲ್ಲಿ ನಿಜವಾಗಿದೆ.



ಚಿಪ್ಪಿಗೂ ಕೂಡ ಶುಕ್ರದೆಸೆ ತಿರುಗಿದ್ದು ಒಂದು ಟನ್ ಚಿಪ್ ಗೆ 25 ಸಾವಿರ ರೂ.ಗೆ ಮಾರಾಟವಾಗುತ್ತಿದೆ. ಅದೇ ರೀತಿ ತೆಂಗಿನಮಟ್ಟೆಗೂ ಕೂಡ ಬೆಲೆ ಬಂದಿದೆ. ಒಂದು ತೆಂಗಿನ ಮರ ನೆಟ್ಟು ಬೆಳೆಸಿದರೆ ಜೀವನಪೂರ್ತಿ ಕುಟುಂಬವನ್ನು ಸಾಕುತ್ತದೆ ಎಂಬ ಗಾದೆ ಮಾತು ಈಗ ಸತ್ಯವಾದಂತಿದೆ.

**ಬೆಲೆಗೆ ಕಾರಣ :** ತೆಂಗು ಬೆಳೆಯುವ ಪ್ರದೇಶವನ್ನು ಅಡಿಕೆ ಗಿಡಗಳು ಆವರಿಸಿದ್ದು, ಉತ್ಪಾದನೆ ಕುಂಠಿತವಾಗಿದೆ. ಇದರ ಜೊತೆಗೆ ನುಸಿ ಸೇರಿದಂತೆ ಮತ್ತಿತರ ರೋಗಗಳಿಗೆ ತುತ್ತಾಗಿ ತೆಂಗಿನ ಮರಗಳು ಒಣಗುತ್ತಿರುವುದರಿಂದ ಮಾರುಕಟ್ಟೆಗೆ ನಿರೀಕ್ಷಿತ ಪ್ರಮಾಣದಲ್ಲಿ ಮಾಲು ಬಾರದಿರುವುದರಿಂದ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.

# ಇರಾನ್–ಇಸ್ರೇಲ್ ನಿಂದ 2,295 ಭಾರತೀಯರ ಸ್ಥಳಾಂತರ

**ನವದೆಹಲಿ, ಜೂ.24–** ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಭಾರತ ಸರ್ಕಾರ ಇರಾನ್ ನಿಂದ 2,295 ನಾಗರಿಕರನ್ನು ಮತ್ತು ಇಸ್ರೇಲ್‌ನಿಂದ 366 ಪ್ರಜೆಗ ’ಳನ್ನು ಸ್ಥಳಾಂತರಿಸಿದೆ.ಇರಾನ್ ನಿಂದ ಸ್ಥಳಾಂತರಿಸಲ್ಪಟ್ಟ ಹೊಸ ಬ್ಯಾಚ್‌ನೊಂದಿಗೆ, ಭಾರತವು ಪರ್ಷಿಯನ್ ಕೊಲ್ಲಿ ರಾಷ್ಟ್ರದಿಂದ 2,295 ಭಾರತೀಯರನ್ನು ಮರಳಿ ಇಲ್ಲಿಗೆ ಕರೆತಂದಿದೆ.

ಬೆಳಿಗ್ಗೆ 8:20 ಕ್ಕೆ ಒಮನ್ ನಿಂದ ಬಂದಿಳಿದ ಚಾರ್ಟರ್ಡ್ ವಿಮಾನದಲ್ಲಿ ಭಾರತ 161 ಭಾರತೀಯರನ್ನು ಮರಳಿ ಕರೆತಂದಿತು,ಭಾರತೀಯರನ್ನು ಭೂ ಗಡಿ ದಾಟುವಿಕೆಗಳ ಮೂಲಕ ಇಸ್ರೇಲ್ ನಿಂದ ಜೋರ್ಡಾನ್‌ಗೆ ಸ್ಥಳಾಂತರಿ ಸಲಾಯಿತು.

165 ಭಾರತೀಯರ ಮತ್ತೊಂದು ಗುಂಪನ್ನು ಸಿ –17 ಮಿಲಿಟರಿ ಸಾರಿಗೆ ವಿಮಾನದಲ್ಲಿ ಒಮನ್ ನಿಂದ ನವದೆಹಲಿಗೆ ಹಿಂತಿರುಗಿದ್ದು ಅವರನ್ನು ಕೇಂದ್ರ ಸಚಿವ ಎ ಲ್ ಮುರುಗನ್ ವಿಮಾನ ನಿಲ್ದಾಣದಲ್ಲಿ ಬರಮಾಡಿ ಕೊಂಡರು. ಇರಾನ್‌ನಿಂದ ಬೆಳಗಿನ ಜಾವ 3:30 ಕ್ಕೆ ಮಶಾದ್‌ನಿಂದ ನವದೆಹಲಿಗೆ ಬಂದಿಳಿದ ವಿಶೇಷ ವಿಮಾನದಲ್ಲಿ 292 ಭಾರ ತೀಯ



ಪ್ರಜೆಗಳನ್ನು ಸ್ಥಳಾಂ ತರಿಸಲಾಗಿದೆ ಎಂದು ವಿದೇ ಶಾಂಗ ಸಚಿವಾಲಯದ ವ ಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಇರಾನ್ ಮತ್ತು ಇಸ್ರೇಲ್ ನಡುವಿನ ಹೊಸ ಯುದ್ಧದ ಅಲೆಯ ನಂತರ ಪ್ರಾರಂಭಿಸಲಾದ ಭಾರತದ ಸ್ಥಳಾಂತರಿಸುವ ಕಾರ್ಯಾ ಚರಣೆ ಆಪರೇಷನ್ ಸಿಂಧು ಬಗ್ಗೆ ವಿವರಗಳನ್ನು ಹಂಚಿಕೊಂಡ ಅವರು, 2,295 ಭಾರತೀಯ ಪ್ರಜೆಗಳನ್ನು ಈಗ ಇರಾನ್‌ನಿಂದ ಮನೆಗೆ ಕರೆತರಲಾಗಿದೆ ಎಂದು ಹೇಳಿದರು.

ಇರಾನ್ ನಗರ ಮಶಾದ್‌ನಿಂದ ನಿನ್ನೆ ರಾತ್ರಿ ವಿಶೇಷ ವಿಮಾನದಲ್ಲಿ 290 ಭಾರತೀಯ ಪ್ರಜೆಗಳು ಮತ್ತು ಒಬ್ಬ ಶ್ರೀಲಂಕಾದವರನ್ನು ಸ್ಥಳಾಂತರಿಸಲಾಯಿತು.ಕಳೆದ ಬುಧವಾರದಿಂದ ಇರಾನಿನ ನಗರವಾದ ಮಶಾದ್‌ನಿಂದ ಅರ್ಮೇನಿಯಾದ ರಾಜಧಾನಿ ಯೆರೆವಾನ್ ಮತ್ತು ತುರ್ಕಮೆನಿಸ್ತಾನ್ ರಾಜಧಾನಿ ಅಶ್ಗಾಬತ್‌ನಿಂದ ಕಾರ್ಯನಿರ್ವಹಿಸುವ ಚಾರ್ಟರ್ಡ್ ವಿಮಾನಗಳಲ್ಲಿ ಭಾರತ ತನ್ನ ಪ್ರಜೆಗಳನ್ನು ಸ್ಥಳಾಂತರಿಸಿದೆ.

# ಬೆಳ್ಳಂಬೆಳಿಗ್ಗೆ ಭ್ರಷ್ಟರಿಗೆ ಲೋಕ ಗಾಳ

**ಬೆಂಗಳೂರು,ಜೂ. 24–** ಶಿವಮೊಗ್ಗದ ಸಾವಯವ ಕೃಷಿ ವಿಭಾಗದ ಸಹ ಸಂಶೋಧನ ನಿರ್ದೇಶಕ ಪ್ರದೀಪ್, ಚಿಕ್ಕಮಗಳೂರು ನಗರಸಭೆ ಅಧಿಕಾರಿ ಲತಾಮಣಿ ಸೇರಿ 8 ಮಂದಿ ಭ್ರಷ್ಟ ಅಧಿಕಾರಿಗಳನ್ನು ಬಲೆಗೆ ಕೆಡವಿರುವ ಲೋಕಾಯುಕ್ತ ಅಧಿಕಾರಿಗಳು ನಗದು ಸೇರಿ ಕೋಟ್ಯಾಂತರ ಮೌಲ್ಯದ ಅಕ್ರಮ ಆಸ್ತಿ ಪಾಸ್ತಿ ಪತ್ತೆ ಹಚ್ಚಿದ್ದಾರೆ.

ಬೆಂಗಳೂರು, ಚಿಕ್ಕಮಗಳೂರು, ಧಾರವಾಡ, ಶಿವಮೊಗ್ಗ, ಗದಗ, ಕಲಬುರಗಿ ಸೇರಿ 12ಕ್ಕೂ ಹೆಚ್ಚು ಜಿಲ್ಲೆಗಳ 40ಕ್ಕೂ ಹೆಚ್ಚು ಕಡೆ ದಾಳಿ ನಡೆಸಲಾಗಿದೆ. ಏಕಕಾಲದಲ್ಲಿ ಇಂದು ಮುಂಜಾನೆ ದಾಳಿ ನಡೆಸಿರುವ ಲೋಕಾಯುಕ್ತ ಅಧಿಕಾರಿಗಳು ಬಲೆಗೆ ಕೆಡವಿದ 8 ಮಂದಿ ಭ್ರಷ್ಟ ಅಧಿಕಾರಿಗಳ ಕೋಟ್ಯಾಂತರ ಮೌಲ್ಯದ ಅಕ್ರಮ ಆಸ್ತಿ ಪಾಸ್ತಿ ವಶಕ್ಕೆ ತೆಗೆದುಕೊಂಡು ಪರಿಶೀಲನೆ ಕೈಗೊಂಡಿದ್ದಾರೆ. ದಾಳಿ ವೇಳೆ ಗದಗ ಶಹರ ಠಾಣೆ ಸಿಪಿಐ ಮನೆಯ ಶೌಚಾಲಯದಲ್ಲಿ ಕುಳಿತುಕೊಂಡಿದ್ದರು. ಆದರೂ ಬಿಡದ ಲೋಕಾಯುಕ್ತ ಅಧಿಕಾರಿಗಳು, ಶೌಚಾಲಯದ ಬಳಿ ಬಂದು ಕಿವಿ ಕೊಟ್ಟು ಯಾರ ಬಳಿಯಾದರೂ ಫೋನ್‌ನಲ್ಲಿ ಮಾತನಾಡುತ್ತಿದ್ದಾರೆಯೇ ಎಂಬುದನ್ನು ಗಮನಿಸಿ ಹೊರಬಂದ ಬಳಿಕ ಅವರ ಅಕ್ರಮ ಆಸ್ತಿ ಪಾಸ್ತಿ ಜಪ್ತಿ ಮಾಡಿದ್ದಾರೆ. ಆನೇಕಲ್ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಕೆ.ಜಿ.ಅಮರನಾಥ್, ಗದಗದ ಪಟ್ಟಣ ಪೊಲೀಸ್ ನಿರೀಕ್ಷಕ ಧ್ರುವರಾಜ್, ಧಾರವಾಡ ಮಲಪ್ರಭಾ ಯೋಜನೆ ಇಂಜಿನಿಯರ್ ಅಶೋಕ್ ವಾಲ್ಸಂದ್, ಕಲಬುರಗಿ ಪಿಆರ್‌ಇ ವಿಭಾಗದ ಇಇ ಮಲ್ಲಿಕಾರ್ಜುನ ಅಲಿಪುರ, ಸಣ್ಣೂರು ಗ್ರಾ.ಪಂ. ಪಿಡಿಒ ರಾಮಚಂದ್ರ ಮನೆ ಮೇಲೆಯೂ ಲೋಕಾಯುಕ್ತ ಅಧಿಕಾರಿಗಳು, ಸಿಬ್ಬಂದಿ ದಾಳಿ ನಡೆಸಿದ್ದು, ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದಾರೆ.

**2 ದಿನದಲ್ಲಿ ನಿವೃತ್ತಿ:** ಕಲಬುರ್ಗಿಯಲ್ಲಿ ಎರಡು ಕಡೆ ಇಬ್ಬರು ಅಧಿಕಾರಿಗಳಿಗೆ ಲೋಕಾ ಅಧಿಕಾರಿಗಳು ದಾಳಿ ನಡೆಸಿದ್ದು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಎಂಜಿನಿಯರ್ ಮಲ್ಲಿಕಾರ್ಜುನ ಅಲಿಪುರ ಅವರ ಬೆಂಗಳೂರಿನ ಮನೆ ಹಾಗೂ ಕಲಬುರಗಿಯಲ್ಲಿರುವ ನಿವಾಸ ಸೇರಿದಂತೆ ಹಲವೆಡೆ ದಾಳಿ ನಡೆದಿದೆ.

ಇನ್ನು ಎರಡು ದಿನದಲ್ಲಿ ನಿವೃತ್ತಿಯಾಗುತ್ತಿದ್ದ ಇವರಿಗೆ ಇಂದು ಅವರ ಕಚೇರಿಯಲ್ಲಿ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಆದರೆ, ಲೋಕಾಯುಕ್ತ ದಾಳಿ ಶಾಕ್ ನೀಡಿದೆ. ಮನೆಯಲ್ಲಿದ್ದ ದಾಖಲೆಗಳು, ಬೆಲೆಬಾಳುವ ವಸ್ತುಗಳನ್ನು ಪತ್ತೆ ಹಚ್ಚಿ ಅವುಗಳ ಮೌಲ್ಯಗಳನ್ನು ಅಂದಾಜು ಮಾಡಲಾಗುತ್ತಿದೆ.

**ಪಿಡಿಓ ಗೆ ಲೋಕಾ ಶಾಕ್ :** ಚಿಕ್ಕಮಗಳೂರು ಪುರಸಭೆ ಕಚೇರಿಯ ಅಕೌಂಟ್ಸ್ ಸೂಪರಿಂಡೆಂಟ್ ಲತಾಮಣಿ.ಡಿ.ಬಿ. ಅವರಿಗೆ ಸೇರಿದ ಮನೆ. ಇನ್ನು ಸಣ್ಣೂರು ಗ್ರಾಮದ ಪಿಡಿಓ ರಾಮಚಂದ್ರ ಅವರ ಸೇಡಂ ರಸ್ತೆಯಲ್ಲಿರುವ ಮಾನಸ ರೆಸಿಡಿನ್ಸಿ ಹಾಗೂ ವಿಜಯಪುರದ ಬೊಮ್ಮನಹಳ್ಳಿಯಲ್ಲಿರುವ ಅವರ ಮನೆಯ ಮೇಲೆ ದಾಳಿ ನಡೆಸಲಾಗಿದೆ.ಹಲವು ಕಡೆ ಕೃಷಿ ಜಮೀನು ಮನೆ ಸೇರಿದಂತೆ ಹಲವೆಡೆ ಆಸ್ತಿ ಸಂಪಾದನೆ ಮಾಡಿರುವುದು ಗೊತ್ತಾಗಿದೆ. ಜಿಲ್ಲಾ ಲೋಕಾ ಎಸ್.ಪಿ. ಉಮೇಶ್, ಡಿವೈಎಸ್‌ಪಿ. ಗೀತಾ ಬೇನಾಳ ನೇತೃತ್ವದಲ್ಲಿ ಸಿಬ್ಬಂದಿಗಳು ದಾಳಿ ನಡೆಸಿದ್ದಾರೆ.

ಶಿವಮೊಗ್ಗದ ಸಾವಾಯವ ಕೃಷಿ ವಿಭಾಗದ ಸಹ ಸಂಶೋಧನಾ ನಿರ್ದೇಶಕ ಡಾ. ಪ್ರದೀಪ್ ಅವರಭದ್ರಾಪುರದಲ್ಲಿರುವ ಫಾರ್ಮ್ ಹೌಸ್, ಹೊಸನಗರದಲ್ಲಿರುವ ಮನೆ ಸೇರಿದಂತೆ ಹಲವೆಡೆ ಎಸ್ಪಿ. ಮಂಜುನಾಥ್ ಚೌಧರಿ ನೇತೃತ್ವದಲ್ಲಿ ದಾಳಿ ನಡೆದಿದೆ.

**ಬ್ಯಾಂಕ್ ಖಾತೆ ಪರಿಶೀಲನೆ:** ಕೃಷಿ ಜಮೀನು, ರಾಜ್ಯದ ಹಲವೆಡೆ ನಿವೇಶನ ಸೇರಿದಂತೆ ಹಲವು ಕಡೆ ವಾಣಿಜ್ಯವ್ಯವಹಾರಗಳನ್ನು ನಡೆಸಲಾಗುತ್ತಿರುವುದು ಕೂಡ ಗೊತ್ತಾಗಿದೆ.

ಶಿಕಾರಿಪುರದಲ್ಲಿರುವ ಅವರ ಮನೆ ಹಾಗೂ ಕಚೇರಿಗಳಲ್ಲಿ ಲೋಕಾ ಅಧಿಕಾರಿಗಳು ಇಂಚಿಂಚೂ ಜಾಲಾಡಿದ್ದಾರೆ. ಅಕ್ರಮ ಸಂಪತ್ತು ಪತ್ತೆಮಾಡಿದ್ದಾರೆ.ಚಿಕ್ಕಮಗಳೂರು ನಗರ ಸಭೆಯ ಲೆಕ್ಕಾಧಿಕಾರಿ ಲತಾಮಣಿ ಅವರ ನಿವಾಸ ಹಾಗೂ ಕಚೇರಿಗಳ ಮೇಲೆ ದಾಳಿ ನಡೆದಿದೆ. ನಗದು ಹಣ, ಚಿನ್ನಾಭರಣ ಸೇರಿದಂತೆ ಹಲವು ಬ್ಯಾಂಕ್ ಖಾತೆಗಳಲ್ಲಿರುವ ಠೇವಣಿಯನ್ನು ಪರಿಶೀಲನೆ ನಡೆಸಲಾಗುತ್ತಿದೆ.

ಗದಗ ನಗರ ಠಾಣೆಯ ಇನ್‌ಸ್ಪೆಕ್ಟರ್ ಧೃವರಾಜ್ ಅವರ ಗದಗದ ಶಿವಾನಂದ ನಗರದಲ್ಲಿರುವ ಮನೆಗೆ ಲೋಕಾಯುಕ್ತ ಪೊಲೀಸರು ಬರುತ್ತಿದ್ದಂತೆಯೇ ಮನೆಯವರು, ಶಾಕ್ ಆಗಿದ್ದಾರೆ.

ಮನೆಯಲ್ಲಿದ್ದ ಕೆಲ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ಇವರಿಗೆ ಬಾಗಲಕೋಟೆ ಹಾಗೂ ಜಮಖಂಡಿಯಲ್ಲಿ ಮನೆಯಿದ್ದು, ಅಪಾರ ಸಂಪತ್ತು ಸಂಪಾದಿಸಿದ್ದಾರೆಂಬ ದೂರುಗಳು ಕೇಳಿಬಂದಿವೆ. ಪೊಲೀಸ್ ಜೀಪ್ ಅನ್ನು ಕೂಡ ತಪಾಸಣೆ ಮಾಡಲಾಗಿದ್ದು, ಡೈರಿ ಹಾಗೂ ಇತರೆ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ.

ದಾಖಲೆ ಪತ್ರ ವಶಕ್ಕೆ:ಧಾರವಾಡದ ಮುಖ್ಯ ಅಭಿಯಂತರ ಅಶೋಕ್ ವಸಂದ್ ಅವರಿಗೆ ಸೇರಿದ ಬೆಳಗಾವಿಯ ಎಜಿಓನಲ್ಲಿರುವ ಭವ್ಯ ಬಂಗಲೆ.ಮನೆಯಲ್ಲಿ ನಗದು ಹಣ ಸೇರಿದಂತೆ ಹಲವು ಆಸ್ತಿ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ನಗರದ ಹೊರವಲಯದ ಆನೇಕಲ್ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಅಮರ್‌ನಾಥ್ ಅವರ ನಿವಾಸ ಹಾಗೂ ಕಚೇರಿಗಳ ಮೇಲೆ ದಾಳಿ ನಡೆದಿದೆ ಇನ್ನು ಬಿಬಿಎಂಪಿಯ ಸಹಾಯಕ ಎಂಜಿನಿಯರ್ ಪ್ರಕಾಶ್ ಅವರ ಗೋವಿಂದರಾಜ ನಗರದಲ್ಲಿರುವ ಕಚೇರಿಯ ಮೇಲೆ ದಾಳಿ ನಡೆಸಲಾಗಿದೆ.

ಇವರು ಹಲವು ನಿವೇಶನಗಳು ಹಾಗೂ ವಾಣಿಜ್ಯ ಕೇಂದ್ರಗಳನ್ನು ಹೊಂದಿರುವುದು ಗೊತ್ತಾಗಿದೆ. ಮನೆಯಲ್ಲಿದ್ದ ನಗದು ಹಾಗೂ ಚಿನ್ನಾಭರಣಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ.ಧಾರವಾಡದಲ್ಲಿ ಮಲಪ್ರಭಾ ಯೋಜನಾ ಪ್ರಾಧಿಕಾರದ ಇಂಜಿನಿಯರ್



ಅಶೋಕ್ ವಾಲ್ಟಂದ್ ಅವರ ನಿವಾಸ ಹಾಗೂ ಕಚೇರಿಗಳ ಮೇಲೆ ಲೋಕಾ ದಾಳಿ ನಡೆದಿದ್ದು, ಇವರ ಬಳಿಯೂ ಕೃಷಿ ಜಮೀನು, ನಿವೇಶನಗಳು ಹಾಗೂ ಅಪಾರ ಸಂಪತ್ತು ಪತ್ತೆಯಾಗಿದೆ.

**ದಾಳಿ ಸಿಕ್ಕಿಬಿದ್ದ ಭ್ರಷ್ಟರು**

ಪ್ರಕಾಶ್ ಎಇ, ಬಿಬಿಎಂಪಿ, ಗೋವಿಂದರಾಜನಗರ, ಬೆಂಗಳೂರು.

ಡಾ , ಎಸ್ ಪ್ರದೀಪ್ ಸಹ ಸಂಶೋಧನ ನಿರ್ದೇಶಕ ಸಾವಯವ ಕೃಷಿ ವಿಭಾಗ ಶಿವಮೊಗ್ಗ

ಲತಾ ಮಣಿ, ಲೆಕ್ಕಾಧಿಕಾರಿ, ನಗರಸಭೆ ಚಿಕ್ಕಮಗಳೂರು.

ಕೆ.ಜಿ. ಅಮರನಾಥ್, ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಆನೇಕಲ್.

ಧ್ರುವರಾಜ್, ಪಟ್ಟಣ ಪೊಲೀಸ್ ನಿರೀಕ್ಷಕ, ಗದಗ.

ಅಶೋಕ್ ವಾಲ್ಸಂದ್, ಎಂಜಿನಿಯರ್, ಮಲಪ್ರಭಾ ಯೋಜನೆ, ಧಾರವಾಡ.

ಮಲ್ಲಿಕಾರ್ಜುನ ಅಲಿಪುರ, ಮಾಜಿ ಎಂಜಿನಿಯರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಲಬುರ್ಗಿ

*ರಾಮಚಂದ್ರ, ಪಿಡಿಒ, ಕಲಬುರ್ಗಿ

ಯುವ ಮಾರ್ಗ

ಬುಧವಾರ : 25–06–2025

# ನಗರದಲ್ಲಿ ಇಂದು ಪರಿಸರ ದಿನಾಚರಣೆ, ಪರಿಸರ ಜಾಥಾ

**ರಾಯಚೂರು,ಜೂ.24–** ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಅರಣ್ಯ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ನಗರದ ಕನ್ನಡ ಭವನದಲ್ಲಿ ಜೂನ್ 25ರ ಬೆಳಿಗ್ಗೆ 11 ಗಂಟೆಗೆ ವಿಶ್ವ ಪರಿಸರ ದಿನಾಚರಣೆ–2025ರ ಅಂಗವಾಗಿ ಪರಿಸರ ಜಾಥಾ ಹಾಗೂ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮತ್ತು ಸಮಾರೋಪ ಸಮಾರಂಭ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪರಿಸರ ಜಾಥಾ ಕಾರ್ಯಕ್ರಮವನ್ನು ಹಿರಿಯ ಶ್ರೇಣಿ ದಿವಾಣಿ ನ್ಯಾಯಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹನುಮಂತ ಅನಂತರಾವ್ ಸ್ವಾತಿಕ್ ಅವರು ಉದ್ಘಾಟಿಸುವರು.

ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಾಪಾತ್ರ, ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರವೀಣ್ ಎಸ್., ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೆ.ಡಿ.ಬಡಿಗೇರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಬಿ.ಎಸ್.ಮುರಳೀಧರ್ ಅವರು ಅಧ್ಯಕ್ಷತೆ ವಹಿಸುವರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಆರ್.ಹೆಚ್.ಸಾಗರ್, ಪರಿಸರ ಅಧಿಕಾರಿ ಈ ಪ್ರಕಾಶ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

# ವಿವಿಧ ವಸತಿ ಶಾಲೆಗಳ ಪ್ರವೇಶಕ್ಕೆ ಜೂನ್ 26 ರಂದು ಎರಡನೇ ಕೌನ್ಸಲಿಂಗ್

**ರಾಯಚೂರು,ಜೂ.24–** ಇಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವಸತಿ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಾತಿಗೆ ಸಂಬಂಧಿಸಿದ ಜೂನ್ 26 ರಂದು 2ನೇ ಆಯ್ಕೆಪಟ್ಟಿಯ ಕೌನ್ಸಲಿಂಗ್‌ಗೆ ಅರ್ಹ ಅಭ್ಯರ್ಥಿಗಳು ಹಾಜರಾಗುವಂತೆ ಕೋರಲಾಗಿದೆ.

ಜಿಲ್ಲೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ರಾಯಚೂರು, ಗಿಲ್ಲೇಸೂಗೂರು, ಮಾನವಿ, ಸಿಂಧನೂರು, ಲಿಂಗಸೂಗೂರು ಹಾಗೂ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಮರಸ್ ಕ್ಯಾಂಪ್ ವಸತಿ ಶಾಲೆ ಮತ್ತು ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆ ರಾಯಚೂರು ಇಲ್ಲಿಗೆ 6ನೇ ತರಗತಿಯಿಂದ 10ನೇ ತರಗತಿಯವರೆಗೆ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅಲ್ಪಸಂಖ್ಯಾತರ ಸಮುದಾಯಕ್ಕೆ ಶೇ.75 ರಷ್ಟು ಸ್ಥಾನಗಳನ್ನು (ಮುಸ್ಲಿಂ ಶೇ.77, ಕ್ರಿಶ್ಚಿಯನ್ ಶೇ.14, ಜೈನ್ ಶೇ.7, ಸಿಖ್ ಶೇ.2, ಭೌದ್ಧ ಶೇ.2) ಶೇ.25ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗೆ ಮೀಸಲಿರಿಸಿ ಏಪ್ರಿಲ್ 27 ರಂದು ಪ್ರವೇಶ ಪರೀಕ್ಷೆ ನಡೆಸಿದ್ದು, ಮೇ.27 ರಂದು ಪ್ರವೇಶ ಪರೀಕ್ಷೆಯ ಫಲಿತಾಂಶ ಮತ್ತು ತಾತ್ಕಾಲಿಕಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ರಾಯಚೂರು ನಗರದ ಚಂದ್ರಬಂಡಾ ರಸ್ತೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಜೂನ್ 26ರ ಬೆಳಿಗ್ಗೆ 9.30ಕ್ಕೆ ಅಲ್ಪಸಂಖ್ಯಾತ ವರ್ಗದ ಬಾಲಕ, ಬಾಲಕಿಯರ ಹಾಗೂ ಇತರೆ ವರ್ಗದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿಗಳಿಗೆ 2ನೇ ಆಯ್ಕೆಪಟ್ಟಿಯ ಕೌನ್ಸಲಿಂಗ್‌ನ್ನು ಏರ್ಪಡಿಸಲಾಗಿದೆ.

ಅಭ್ಯರ್ಥಿಗಳು ಪರೀಕ್ಷೆಯ ಪ್ರವೇಶ ಪತ್ರ, ವಿದ್ಯಾರ್ಥಿಯ 5 ನೇ ತರಗತಿ ಅಂಕಪಟ್ಟಿ. ಜಾತಿ ಮತ್ತು ಆದಾಯ ಪ್ರಮಾಣ ಪತ್ರ. ವಿದ್ಯಾರ್ಥಿಯ ಆಧಾರ್ ಕಾರ್ಡ್, ವಿಶೇಷ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಸಂಬಂಧಿಸಿದ ಪ್ರಮಾಣ ಪತ್ರದೊಂದಿಗೆ ಹಾಜರಾಗುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿ.ಗಣೇಕಲ್ ಗ್ರಾಮದಲ್ಲಿ : ಸೋರುತಿಹುದು ಸಂಬಂಧ ಸಾಮಾಜಿಕ ನಾಟಕ ಪ್ರದರ್ಶನ

**ಯುವ ಮಾರ್ಗ ಸುದ್ದಿ**

**ಅರಕೇರಾ,ಜೂ.24–** ಸೋಮುವಾರ ಸಂಜೆ ವಿದ್ಯಾಭಾರತಿ ಹಿರಿಯ ಪ್ರಾಥಮಿಕ ಶಾಲೆ ಆವರಣರದಲ್ಲಿ ವಿದ್ಯಾಭಾರತಿ ಎಜ್ಯುಕೇಶನ್ ಟ್ರಸ್ಟ್ ಬಿ.ಗಣೇಕಲ್ ಇವರು ಆಯೋಜಿಸಿರುವ ಧಾತ್ರಿ ರಂಗ ಸಂಸ್ಥೆ ಸಿರಿಗೇರಿ ಕಲಾ ತಂಡದ ವತಿಯಿಂದ ಮಹಾಂತೇಶ ರಾಮದುರ್ಗ ರಚನೆ ನಿರ್ದೇಶನದ "ಸೋರುತಿಹದು ಸಂಬಂದ" ಎಂಬ ಕಿರು ನಾಟಕದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ನಾಟಕದ ಗ್ರಾಮ ಪಂಚಾಯತಿ ಅಧ್ಯಕ್ಷೆ ರಂಗಮ್ಮ ಸೋಮಯ್ಯ ಹಾಗೂ ಉಪಾಧ್ಯಕ್ಷೆ ಹನುಮಂತಿ ಹನುಂತ್ರಾಯ ಉದ್ಘಾಟಿಸಿದರು ಈ ಸಂದರ್ಭದಲ್ಲಿ ವೀರಭದ್ರಪ್ಪ ಅಧ್ಯಕ್ಷರು ಜ್ಞಾನ ಲಹರಿ ಶಾಲೆ ಗಲಗ ಮಾತನಾಡಿ ಪ್ರಸ್ತುತ ದಿನಗಳಲ್ಲಿ ಮಕ್ಕಳು ಟಿ.ವಿ.ಮೊಬೈಲ್ ಗಳಿಗೆ ಮಾರುಹೋಗಿದ್ದು ಇದರಿಂದ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಹಾಗೂ ರಾಮಾಯಣ ಮಹಾಭಾರತದ ಬಗ್ಗೆ ತಿಳಿಸಿಕೊಡುವ ಬಯಲಾಟ ಕೋಲಾಟ ಬೀದಿ ನಾಟಕ ಸಮಾಜಿಕ ನಾಟಕಗಳು ಕಣ್ಮರೆಯಾಗುತಿದ್ದು ಆದ್ದರಿಂದ ಪಾಲಕರು ಇಂತಹ ಸಮಾಜಿಕ ನಾಟಕಗಳನ್ನು ನೋಡುವ ಆಸಕ್ತಿಯನ್ನು ಪಾಲಕರು ತಮ್ಮ ಮಕ್ಕಳಿಗೆ ಮನವರಿಕೆ ಮಾಡಬೇಕು ಎಂದು ಅಂದಾಗ ಮಾತ್ರ ಸಮಾಜದಲ್ಲಿ ನಡೆಯುವ ಬೆಳವಣಿಗೆ ಬಗ್ಗೆ ತಿಳುವಳಿಕೆ ಬರುತ್ತದೆ ಎಂದು ಕಾರ್ಯಕ್ರಮದಲ್ಲಿ ನೇರದಿದ್ದ ಪಾಲಕರಿಗೆ ಸಲಹೆ ನೀಡಿದರು

ಸೋರುತಿಹದು ಸಂಬಂದ ಎಂಬ ಕಿರು ನಾಟಕ ಬಹಳಷ್ಟು ನೋಡಲು ಸೊಗಸಾಗಿತ್ತು ಇದರಲ್ಲಿ ಹಾಡು ಕುಣಿತ ಪೋಸ್ಟ್ ಮಾಸ್ತರನ ನಗೆ ಚಟಾಕಿ ಮೂಗನ ಹಾಸ್ಯ ಹಾಗೂ ಕಿವುಡ ಕಲಾವಿದನ ಹಾಡುಗಳು ರಸಭರಿತವಾಗಿದ್ದವು ಅದರಲ್ಲೂ ಮಕ್ಕಳಿಗಾಗಿ ಆಸ್ತಿ ಮಾಡಬೇಡಿ ಮಕ್ಕಳನ್ನೆ ಆಸ್ತಿಯನ್ನಾಗಿ ಮಾಡಿ ಎಂಬ ಸಂದೇಶ ಸಾರುವ ದೃಶ್ಯ ತದನಂತರ ಮನೆಯ ಯಜಮಾನ ಹೃದಯಘಾತದಿಂದ ಮೃತಪಟ್ಟಾಗ ಮಕ್ಕಳಿಗೆ ವಿಷಯ ತಿಳಿಸಿದರು ತಂದೆ ಅಂತಿಮ ಸಂಸ್ಕಾರಕ್ಕೆ ಬರದೆ ಇರುವ ಸನ್ನಿವೇಶ ನೋಡುಗರ ಕಣ್ಣಂಚಲಿ ನೀರು ತರುವಂತಿತ್ತು ಕೊನೆಯದಾಗಿ ಸರ್ಕಾರದ ಅವ್ಯವಸ್ಥೆಯನ್ನು ಸೂಕ್ಷವಾಗಿ ಎತ್ತಿ ತೋರಿಸಿ ಪಿಂಚಣಿ



ಬಾರದೆ ವೃದ್ದರು ಅನುಭವಿಸುವ ನೋವಿನ ದೃಶ್ಯಗಳು ಬಹಳ ಚನ್ನಾಗಿ ಮೂಡಿಬಂತು ಒಟ್ಟಿನಲ್ಲಿ ಧಾತ್ರಿ ರಂಗ ಸಂಸ್ಥೆಯ ಕಲಾವಿದರು ತಮ್ಮ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಪ್ರೇಕ್ಷಕರಿಗೆ ಮಕ್ಕಳಿಗೆ ಉತ್ತಮ ಮನೋರಂಜನೆ ನೀಡಿದರು.

ನಂತರ ನಾಟಕದ ಕುರಿತು ಊರಿನ ಯುವಕರಾದ ಎಚ್.ಎಸ್.ನಾಯಕ ಮಾತನಾಡಿ ಹಿಂದಿನ ದಿನಗಳಲ್ಲಿ ಇಂತಹ ಬೀದಿ ನಾಟಕಗಳ ಮುಖಾಂತರ ಜನರಿಗೆ ಶಿಕ್ಷಣ, ಆರೋಗ್ಯ, ಸ್ವಚ್ಛತೆ ಇನ್ನಿತರ ಅಭಿಯಾನದ ಕುರಿತು ಮಾಹಿತಿ ನೀಡುತಿದ್ದರು ಇಂತಹ ನಾಟಕಗಳು ಈಗ ಕಣ್ಮರೆಯಾಗಿದ್ದು ನಿಮ್ಮ ನಾಟಕದಿಂದ ಹೊಸತನ್ನು ನೋಡಿದಂತಾಯಿತು ಅದರಲ್ಲೂ ಮಕ್ಕಳಿಗೆ ಜೀವನದಲ್ಲಿ ಈ ನಾಟಕ ಹೊಸ ಅನುಭವದಂತೆ ಕಂಡಿತು ಎಂದು ಅನಿಸಿಕೆ ವ್ಯಕ್ತಪಡಿಸಿ ಧಾತ್ರಿ ರಂಗ ಸಂಸ್ಥೆಯಿಂದ ಇನ್ನು ಹೆಚ್ಚಿನ ಸಾಮಾಜಕ್ಕೆ ಉತ್ತಮ ಸಂದೇಶ ನೀಡುವ ನಾಟಕಗಳು ಮೂಡಿಬರಲೆಂದು ಹಾರೈಸಿದರು

ಕೊನೆಗಟ್ಟವಾಗಿ ಶ್ರೀವಿಧ್ಯಾಭಾರತಿ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷರಾದ ಹಂಪಣ್ಣ ಪಲ್ಲೇದ್ ಇವರು ಎಲ್ಲಾ ಕಲಾವಿದರಿಗೆ ಸನ್ಮಾನಿಸುವ ಮುಖಾಂತರ ಪ್ರೋತ್ಸಾಹ ನೀಡಿದರು.

ಈ ಕಾರ್ಯಕ್ರಮದಲ್ಲಿ ಮಹೇಶಗೌಡ ಮಾಲಿ ಪಾಟೀಲ್, ಶಿವಣ್ಣ ಕೋಟೆ, ಅಯ್ಯಣ್ಣ ಕಟ್ಟಿಮನಿ, ಶ್ರೀ ವಿದ್ಯಾ ಭಾರತಿ ಶಾಲೆಯ ಸಿಬ್ಬಂದಿ ವರ್ಗ, ಪಾಲಕರು, ಮಹಿಳೆಯರು ಚಿಕ್ಕ ಮಕ್ಕಳು, ಊರಿನ ಗ್ರಾಮಸ್ಥರು ಭಾಗವಹಿಸಿದ್ದರು.

# ರಾಯಚೂರು ಬುಡಕಟ್ಟು ಉತ್ಸವದಲ್ಲಿ ಮಹಿಳಾ ಸ್ವಾವಲಂಬನೆಗೆ ಒತ್ತು

**ಯುವ ಮಾರ್ಗ ಸುದ್ದಿ**



**ರಾಯಚೂರು,ಜೂ.24–** ರಾಯಚೂರು ತಾಲೂಕಿನ ಯೆರಗೇರಾ ಗ್ರಾಮದಲ್ಲಿ ನಡೆದ ಜಿಲ್ಲಾ ಮಟ್ಟದ ಬುಡಕಟ್ಟು ಸಾಂಸ್ಕೃತಿಕ ಉತ್ಸವದಲ್ಲಿ, ಬುಡಕಟ್ಟು ಮಹಿಳೆಯರ ಸಬಲೀಕರಣಕ್ಕೆ ವಿಶೇಷ ಗಮನ ನೀಡಲಾಯಿತು. ಜಿಲ್ಲಾ ಪಂಚಾ ಯತ್, ಜಿಲ್ಲಾಡಳಿತ ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಆಶ್ರಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮೈಸೂರಿನಿಂದ ಬಂದ ಬುಡಕಟ್ಟು ಮಹಿಳೆಯರು ತಯಾರಿಸಿದ 'ಪ್ರಕೃತಿ ಫುಡ್ ಪ್ರಾಡಕ್ಟ್' ಮಾರಾಟ ಮಳಿಗೆ ಪ್ರಮುಖ ಆಕರ್ಷಣೆಯಾಗಿತ್ತು.

ಸಂಸದ ಜಿ. ಕುಮಾರ್ ನಾಯಕ್ ಮತ್ತು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಅವರು ಬೃಂದಾವನ ಮಹಿಳಾ ಸ್ವ–ಸಹಾಯ ಸಂಘದ ಈ ಮಳಿಗೆಯನ್ನು ಉದ್ಘಾಟಿಸಿದರು. ಜಿಲ್ಲಾ ಮಟ್ಟದ ಅಧಿಕಾರಿಗಳು ಮಳಿಗೆಗೆ ಭೇಟಿ ನೀಡಿ, ಮಹಿಳೆಯರ ಉತ್ಪನ್ನಗಳ ಬಗ್ಗೆ ಮಾಹಿತಿ ಪಡೆದರು.

ಮೈಸೂರಿನ ಎಚ್.ಡಿ. ಕೋಟೆ ತಾಲೂಕಿನ ಹತ್ತು ಗಿರಿಜನ ಹಾಡಿಗಳಿಂದ ಬಂದ ಮಹಿಳೆಯರು ಈ ಆಹಾರ ಉತ್ಪನ್ನಗಳನ್ನು ತಯಾರಿಸುತ್ತಿದ್ದು, ಇವರ ಜೀವನೋಪಾಯಕ್ಕೆ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆ ಬೆಂಬಲ ನೀಡಿದೆ. ಈ ಹಾಡಿಗಳಲ್ಲಿ ಹತ್ತು ಆಹಾರ ಘಟಕಗಳನ್ನು ಸ್ಥಾಪಿಸಿ ನೂರಾರು ಮಹಿಳೆಯರಿಗೆ ಸ್ವಾವಲಂಬಿ ಜೀವನಕ್ಕೆ ದಾರಿ ತೋರಿಸಿದೆ.

"ನಾವು ಶೇಂಗಾ ಎಣ್ಣೆ, ಕುಸುಬೆ ಎಣ್ಣೆ, ಜೇನು, ಬಾಳೆಕಾಯಿ ಚಿಪ್ಸ್, ಆಲೂಗಡ್ಡೆ ಚಿಪ್ಸ್, ರಾಗಿ ಹಪ್ಪಳ, ರಾಗಿ ಮಿಲ್ಲೆಟ್ ಮುಂತಾದವುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದೇವೆ. ಇದು ನಮ್ಮ ಕುಟುಂಬಗಳಿಗೆ ಉತ್ತಮ ಜೀವನಕ್ಕೆ ಸಹಕಾರಿಯಾಗಿದೆ" ಎಂದು 'ಪ್ರಕೃತಿ ಗಿರಿಜನ ಮಹಿಳಾ ಫುಡ್ ಪ್ರಾಡಕ್ಟ್ ಯೂನಿಟ್' ನ ಸರಸು ಮತ್ತು ರಾಗಿಣಿ ಎಂಬ ಮಹಿಳೆಯರು ತಿಳಿಸಿದರು. ಈ ಅವಕಾಶ ಕಲ್ಪಿಸಿದ್ದಕ್ಕಾಗಿ ಆಯೋಜಕರಿಗೆ ಮತ್ತು ಅಧಿಕಾರಿಗಳಿಗೆ ಅವರು ಧನ್ಯವಾದ ಸಲ್ಲಿಸಿದರು.

ಎಸ್‌ವಿಯೂಎಂ ನಿರ್ದೇಶಕ ಡಾ. ಡೆನ್ನಿಸ್ ಚೌಹಾನ್, ಎಚ್.ಡಿ. ಕೋಟೆ ತಾಲೂಕಿನ ಜಾಗನ ಕೋಟೆ, ಅಣ್ಣೂರು ಹಾಡಿ, ಹುಣಸೆ ಕುಪ್ಪಿ ಹಾಡಿ, ಮಂಚೇನಗೌಡ ಹಳ್ಳಿ, ಪಂಚೆನ ಹಾಡಿ ಸೇರಿದಂತೆ ಹತ್ತು ಹಾಡಿಗಳಲ್ಲಿರುವ ಮಹಿಳೆಯರಿಗಾಗಿ ಈ ಘಟಕಗಳನ್ನು ಸ್ಥಾಪಿಸಲಾಗಿದೆ ಎಂದು ಮಾಹಿತಿ ನೀಡಿದರು. ಈ ಚಿಕ್ಕ ಉದ್ದಿಮೆಗಳು ಅನೇಕ ಬಡ ಮತ್ತು ಹಾಡಿ ಜನಾಂಗದ ಮಹಿಳೆಯರ ಆರೋಗ್ಯ ಮತ್ತು ಶಿಕ್ಷಣದಲ್ಲಿ ಬದಲಾವಣೆ ತರುತ್ತಿವೆ ಎಂದು ಅವರು ಹೇಳಿದರು.

ಸುರೇಶ್, ವಿನಾಯಕ, ನಯನಾ, ಲಿಂಗಪ್ಪ, ಭೀಮಯ್ಯ, ಈರಣ್ಣ, ಗಂಗಮ್ಮ, ರಾಮಕೃಷ್ಣ ಮತ್ತು ಬೃಂದಾವನ ಮಹಿಳಾ ಸಂಘದ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕಪಗಲ್ ಗ್ರಾಮದಲ್ಲಿ ದುಡಿಯೋಣ ಬಾ ಅಭಿಯಾನ ಜೊತೆಗೆ ನರೇಗಾ ಕೂಲಿ ಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಜೂ.24–** ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕಪಗಲ್ ಗ್ರಾಮ ಪಂಚಾಯಿತಿಯ ಕಪಗಲ್ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಖಾತ್ರಿ ಯೋಜನೆ ಅಡಿಯಲ್ಲಿ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ಜಿಲ್ಲಾ ಪಂಚಾಯತ್ ರಾಯಚೂರ್,ತಾಲೂಕ್ ಪಂಚಾಯತ್ ಮಾನ್ವಿ, ಗ್ರಾಮ ಪಂಚಾಯತ್ ಕಪಗಲ್ ಹಾಗೂ ಆರೋಗ್ಯ ಇಲಾಖೆ ಇವರಗಳ ಸಂಯುಕ್ತ ಆಶ್ರಯದಲ್ಲಿ ಇಂದು ದಿನಾಂಕ : 24–06–2025 ರಂದು ಉಚಿತ ಆರೋಗ್ಯ ತಪಾಸಣೆ ಕುರಿತು ಹನುಮಂತಿ ಸಮುದಾಯ ಆರೋಗ್ಯ ಅಧಿಕಾರಿಗಳು ಕಪಗಲ್ ರವರು ಮಾತನಾಡಿ ಮಹಾತ್ಮ ಗಾಂಧಿ ರಾಷ್ಟ್ರೀಯ ಖಾತ್ರಿ ಯೋಜನೆಯಲ್ಲಿ ತಮಗೆ ಕೆಲಸ ನೀಡಿರುವ ಜೊತೆಗೆ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ, ನಿಮಗೆ ಸ್ಥಳದಲ್ಲಿ ಶುಗರ್,ಬಿಪಿ ಪರೀಕ್ಷೆ ಮಾಡಲಾಗುತ್ತದೆ, ಹಾಗೂ ಕಣ್ಣಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ತೊಂದರೆಗಳಿದ್ದಲ್ಲಿ ತಾವುಗಳು ಪ್ರತಿ ಗುರುವಾರ ನಡೆಯುವ ಕಣ್ಣಿನ ತಪಾಸಣೆಯನ್ನು ಪ್ರಥಮಿಕ ಆರೋಗ್ಯ ಆಸ್ಪತ್ರೆ ಮಾನ್ವಿ ಭೇಟಿ ನೀಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ತಿಳಿಸಲಾಯಿತು



,ಬಿಪಿ ಹೆಚ್ಚಾದಾಗ ನಿಮ್ಮ ತಲೆನೋವು ಹೆಚ್ಚಾಗುತ್ತದೆ,ಅದಕ್ಕಾಗಿ ಆರೋಗ್ಯದ ಬಗ್ಗೆ ಹೆಚ್ಚಾಗಿ ಕಾಳಜಿ ವಹಿಸಬೇಕು ಎಂದು ಕೂಲಿ ಕಾರ್ಮಿಕರಿಗೆ ತಿಳಿಸಿದರು,

ನಂತರ ಈರೇಶ್ ತಾಲೂಕ ಐಇಸಿ ಸಂಯೋಜಕರು ಮಾನವಿಯ ವರು ಮಾತನಾಡಿ ಪ್ರತಿಯೊಂದು ಕುಟುಂಬಕ್ಕೆ ನರೇಗಾ ಯೋಜನೆಯಿಂದ ನೂರು ದಿನಸುಗಳ ಕೂಲಿ ಕೆಲಸ ಭದ್ರತೆ ನೀಡುತ್ತದೆ, ಕಳೆದ ಏಪ್ರಿಲ್ ತಿಂಗಳಿನಿಂದ ಕೂಲಿ ದರವು ಕೂಡ 370ಕ್ಕೆ ಹೆಚ್ಚಳವಾಗಿದೆ, ಪ್ರಧಾನ ಮಂತ್ರಿ ಜೀವ ಸುರಕ್ಷಾ ಭೀಮಾ ಯೋಜನೆ ಹಾಗೂ ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಎರಡು ಇನ್ಸೂರೆನ್ಸ್ ಗಳನ್ನು ಕಡ್ಡಾಯವಾಗಿ ಎಲ್ಲಾ ಕೂಲಿಕಾರ್ಮಿಕರು ಮಾಡಿಸಿಕೊಳ್ಳುವಂತೆ ಮನವಿ ಮಾಡಲಾಯಿತು, ಸದರಿ ಸಮಯದಲ್ಲಿ ಎಲ್ಲಾ ನರೇಗಾ ಕೂಲಿ ಕಾರ್ಮಿಕರಿಗೆ ಬಿಪಿ, ಶುಗರ್, ಗರ್ಭಿಣಿ ಸ್ತ್ರೀಯರಿಗೆ ಹಿಮೋಗ್ಲೋಬಿನ್ ಪ್ರಮಾಣವನ್ನು ಪರೀಕ್ಷೆ ಮಾಡಿ ಆರೋಗ್ಯ ತಪಾಸಣೆಯನ್ನು ಮಾಡಿ ಅವಶ್ಯಕತೆ ಇರುವಂತಹ ಕೆಮ್ಮು ನೆಗಡಿ ಜ್ವರ ಇನ್ನಿತರ ರೋಗಗಳಿಗೆ ಸ್ಥಳದಲ್ಲಿ ಮಾತ್ರೆಗಳನ್ನು ನೀಡಲಾಯಿತು,

ಸದರಿ ಸಂದರ್ಭದಲ್ಲಿ ರಾಮವ್ವ ಗ್ರಾಮ ಪಂಚಾಯತ್ ಸದಸ್ಯರು,ಹನುಮಂತಿ ಮತ್ತು ಹುಸೇನಮ್ಮ ಸಮುದಾಯ ಆರೋಗ್ಯ ಅಧಿಕಾರಿಗಳು, ಈರೇಶ್ ತಾಲೂಕ ಐಇಸಿ ಸಂಯೋಜಕರು ತಾಲೂಕ್ ಪಂಚಾಯತ್ ಮಾನ್ವಿ, ಸಿದ್ದರಾಮ ಬಿಎಫ್ಟಿ ಕಪಗಲ್, ಅನ್ನಪೂರ್ಣ ಆಶಾ ಕಾರ್ಯಕರ್ತೆ, ಕಪಗಲ್ ಗ್ರಾಮ ಪಂಚಾಯತಿ ನರೇಗಾ ಕೂಲಿ ಕಾರ್ಮಿಕರ ಹಾಗೂ ಮೇಟಿಗಳ ಹಾಜರಿದ್ದರು,,

# ಐವರು ವಾಹನ ಚಾಲಕರ ಅಂತಿಮ ಆಯ್ಕೆಪಟ್ಟಿ ಪ್ರಕಟ

**ರಾಯಚೂರು,ಜೂ.24–**ಇಲ್ಲಿನ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ 05 ವಾಹನ ಚಾಲಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಕರ್ನಾಟಕ ಅಬಕಾರಿ (ನೇಮಕಾತಿ) ನಿಯಮಗಳು, 1996 ಮತ್ತು ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ನಿಯಮಗಳನುಸಾರ ಆಯ್ಕೆ ಪ್ರಕ್ರಿಯೆಗಳನ್ನು ನಡೆಸಿ ಅಂತಿಮ ಆಯ್ಕೆ ಪಟ್ಟಿಯನ್ನು 28–03–2025ರಂದು ಪ್ರಕಟಿಸಿ, ಈ ಆಯ್ಕೆಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಈ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಅಬಕಾರಿ ಇಲಾಖೆಯ ವಾಹನ ಚಾಲಕರ ವೃಂದದ ನೇಮಕಾತಿ ಸಮಿತಿಯ ಅಧ್ಯಕ್ಷರು ಹಾಗೂ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಹನುಮೇಶ್ ತಂದೆ ಬಸಪ್ಪ ಬರಿನಾಳ ಸಾ.ಗುಡದನಾಳ ತಾ.ಲಿಂಗಸೂರ, ರಂಗನಾಥ ತಂದೆ ಚಿದಾನಂದ, ನಗರಗುಂದ ರೋಡ್ ಡಿಗ್ರಿ ಕಾಲೇಜ್ ಹತ್ತಿರ ದೇವದುರ್ಗ, ಅರುಣ್ ಕುಮಾರ್ ತಂದೆ ಆನಂದ ಕಳ್ಳಿಮನಿ ಮೇದಾಗಲ್ಲಿ ತಾ.ಸುರಪುರ, ಖಾಜಾ ನಿಹಾರ ಬಾಷಾ ತಂದೆ ಮಹಮದ್ ಖಾಸಿಂ, ಸಾ.ಅಸ್ಕಿಹಾಳ ತಾ.ರಾಯಚೂರ, ಮಹಮದ್ ಇದ್ರಿಸ್ ತಂದೆ ಮೆಹಬೂಬ್ ಸಾಬ್, ಅರಕೇರಾ, ತಾ.ದೇವದುರ್ಗ ಇವರು ಅವರು ಅಂತಿಮ ಆಯ್ಕೆಪಟ್ಟಿಯಲ್ಲಿ ಇರುವ ಅಭ್ಯರ್ಥಿಗಳಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೆಸ್ಕಾಂ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ

**ರಾಯಚೂರು,ಜೂ.24–**ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ವ್ಯಾಪ್ತಿಗೆ ಬರುವ 110/11 ಕೆವಿ ವಡವಟ್ಟಿ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಜೂನ್ 26ರ ಬೆಳಗ್ಗೆ 09 ಗಂಟೆಯಿಂದ ಸಾಯಂಕಾಲ 04 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ತರಬೇತಿಗೆ ಅರ್ಜಿ

**ರಾಯಚೂರು,ಜೂ.24–** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಖೇಲೋ ಇಂಡಿಯಾ ಯೋಜನೆಯಡಿ ಸಣ್ಣ ಖೇಲೋ ಇಂಡಿಯಾ ಕೇಂದ್ರಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದ್ದು, ಉತ್ತಮ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಒಂದು ವರ್ಷದ ಅವಧಿಗೆ ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಖೇಲೋ ಇಂಡಿಯಾ ಯೋಜನೆಯಡಿ ಅಥ್ಲೆಟಿಕ್ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತಿದ್ದು, ಜಿಲ್ಲೆಯ ಆಸಕ್ತ 12 ರಿಂದ 18 ವರ್ಷದ ಬಾಲಕ ಬಾಲಕಿಯರು ತಮ್ಮ ಜನ್ಮ ದಿನಾಂಕ ದೃಢೀಕರಣ ಪತ್ರ (ಶಾಲೆ ಅಥವಾ ಕಾಲೇಜು ಮುಖ್ಯಸ್ಥರಿಂದ ದೃಢೀಕೃತ) ಹಾಗೂ ಕ್ರೀಡಾ ಸಾಧನೆಯ ಪ್ರಶಸ್ತಿ ಪತ್ರದೊಂದಿಗೆ ಜೂನ್ 26ರ ಬೆಳಿಗ್ಗೆ 10 ಗಂಟೆಗೆ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣ ರಾಯಚೂರು ಇಲ್ಲಿ ನೋಂದಣೆ ಮಾಡಿಕೊಳ್ಳಬಹುದಾಗಿದೆ.

ಆಯ್ಕೆ ಪ್ರಕ್ರಿಯೆಗೆ ಕ್ರೀಡಾ ಸಮವಸ್ತ್ರದೊಂದಿಗೆ ಭಾಗವಹಿಸಬೇಕಾಗಿದ್ದು, ಅಥ್ಲೆಟಿಕ್ ಕ್ರೀಡೆಯ ಟ್ರಾಯಕ್ ಮತ್ತು ಫೀಲ್ಡ್ ಇವೆಂಟ್ಸಗಳಲ್ಲಿ ಆಯ್ಕೆ ಮಾಡಲಾಗುತ್ತದೆ. ಇತ್ತೀಚಿನ 02 ಭಾವಚಿತ್ರದೊಂದಿಗೆ ಸ್ವ–ವಿವರದ ಅರ್ಜಿಯನ್ನು ಆಯ್ಕೆ ಸಂದರ್ಭದಲ್ಲಿ ಸಲ್ಲಿಸಬೇಕು. ಆಯ್ಕೆ ಸಂದರ್ಭದಲ್ಲಿ ಯಾವುದೇ ಗಾಯಗಳು ಅನಾರೋಗ್ಯ ಯಾವುದೇ ಇತರೆ ಸಾವು ನೋವುಗಳು ಶಾಶ್ವತ ಅಂಗವೈಕಲ್ಯ ಮತ್ತು ಜೀವಹಾನಿ ಸಂಭವಿಸಿದರೆ ಸಂಸ್ಥೆ ಅಥವಾ ಇಲಾಖೆ ಜವಾಬ್ದಾರಿಯುತವಾಗಿರುವುದಿಲ್ಲ. ಹಾಗೂ ಆಯ್ಕೆಗೆ ಹಾಜರಾಗುವ ಕ್ರೀಡಾಪಟುಗಳಿಗೆ ಯಾವುದೇ ರೀತಿಯ ದಿನ ಭತ್ಯೆ ಅಥವಾ ಪ್ರಯಾಣ ಭತ್ಯೆ ನೀಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣ ರಾಯಚೂರು ಕಚೇರಿ ಅಥವಾ ಖೇಲೋ ಇಂಡಿಯಾ ತರಬೇತುದಾರರಾದ ಚಂದ್ರಶೇಖರ್ ಮೊಬೈಲ್ ಸಂಖ್ಯೆ: 9886551214ಗೆ ಸಂಪರ್ಕಿಸುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ವಾಭಿಮಾನ ಸ್ವದೇಶಿ ಮಾರ್ಟ್ ಒಳನುಸುಳಿ 2.70 ಲಕ್ಷ ರೂ. ಕಳ್ಳತನ

**ಕಲಬುರಗಿ,ಜೂ.24–**ನಗರದ ಸೇಡಂ ರಸ್ತೆಯಲ್ಲಿರುವ ಸ್ವಾಭಿಮಾನ ಸ್ವದೇಶಿ ಮಾರ್ಟನ ಒಳನುಸುಳಿದ ಕಳ್ಳನೊಬ್ಬ ಅಲಮಾರಾ ಮತ್ತು ಇತರೆ ಜಾಗಗಳಲ್ಲಿ ಇಟ್ಟ 2.70 ಲಕ್ಷ ನಗದನ್ನು ಕಳವು ಮಾಡಿಕೊಂಡು ಹೋಗಿರುವ ಘಟನೆ ನಡೆದಿದೆ.ಮಾರ್ಟನ ಛಾವಣಿಗೆ ಹಾಕಿದ ಸ್ಟೀಲ್ ಪತ್ರದಾ ಸ್ಕ್ರೂಗಳನ್ನು ಸ್ಕ್ರೂಡ್ರೈವರ್‌ನಿಂದ ಬಿಚ್ಚಿ ಒಳನುಸುಳಿರುವ ಕಳ್ಳ ಅಲಮಾರದಲ್ಲಿರುವ ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುವುದು ಮಾರ್ಟನ ಸಿಸಿಟಿವಿ ಕೆಮೆರಾಗಳಲ್ಲಿ ಸೆರೆಯಾಗಿದೆ. ಎಂ.ಬಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**